ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 269 RNI Number : KNKAN/25/A2770 12-10-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ:269 ರಾಯಚೂರು 12-10-2026 ಸೋಮವಾರ ಪುಟ 04 ಬೆಲೆ ರೂ.2/- RCR/L/RNP/117/2026-28

ದೊರೆಯ ಹಬ್ಬವಾಗಿದ್ದ ದಸರಾ ಇಂದು ಧರೆಯ ಹಬ್ಬವಾಗಿದೆ: ಅಭಿನವ ಗವಿಸಿದ್ದೇಶ್ವರ ಶ್ರೀ

ಮೈಸೂರು: ಮೈಸೂರು ಸಾಂಸ್ಕೃತಿಕ ನಗರಿ, ಅರಮನೆಗಳ ನಗರಿ, ಸ್ವಚ್ಛತೆ ಮತ್ತು ಶಿಸ್ತಿಗೆ ಹೆಸರಾದ ನಗರ. ಇಂತಹ ಐತಿಹಾಸಿಕ ನಗರದಲ್ಲಿ ನಡೆಯುವ ದಸರಾ ಮಹೋತ್ಸ ವದ ವೈಭವದ ಹಿಂದೆ ಸಾವಿರಾರು ಕಾಣದ ಕೈಗಳ ಪರಿಶ್ರಮವಿದೆ. ಒಂದು ಕಾಲದಲ್ಲಿ ದೊರೆಯ ಹಬ್ಬವಾಗಿದ್ದ ದಸರಾ ಇಂದು ಧರೆಯ ಹಬ್ಬವಾಗಿ ಜನಸಾಮಾನ್ಯರ ಉತ್ಸ ವವಾಗಿದೆ ಎಂದು ಅಭಿನವ ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿ ಹೇಳಿದ್ದಾರೆ.

2026ರ ಮೈಸೂರು ದಸರಾ ಮಹೋತ್ಸ ವವನ್ನು ರವಿವಾರ ಉದ್ಘಾಟಿಸಿ ಮಾತನಾಡಿದ ಅವರು, ''ನಾನು ದಸರಾ ಉದ್ಘಾಟಿಸುವಷ್ಟು ದೊಡ್ಡವನಲ್ಲ. ಮಹಾನುಭಾವರು ಹಚ್ಚಿದ ದೀಪ ಆರದಿರಲಿ ಎಂಬ ಪ್ರಾರ್ಥನೆಯೊಂದಿಗೆ ಚಾಮುಂಡೇಶ್ವರಿಯ ಸನ್ನಿಧಿಗೆ ಬಂದಿದ್ದೇನೆ. ನಾಡಿನಲ್ಲಿ ಉತ್ತಮ ಮಳೆ-ಬೆಳೆಯಾಗಿ ರೈತರ ಮುಖದಲ್ಲಿ ನಗು ಮೂಡಲಿ, ಜನರು ಸುಖ-ಶಾಂತಿಯಿಂದ ಬದುಕಲಿ ಎಂದು ತಾಯಿಯಲ್ಲಿ ಪ್ರಾರ್ಥಿಸುತ್ತೇನೆ'' ಎಂದರು.

ಮೈಸೂರಿನ ದಸರಾ ಭೂತ, ವರ್ತಮಾನ ಮತ್ತು ಭವಿಷ್ಯಗಳ ತ್ರಿವೇಣಿ ಸಂಗಮವಾಗಿದೆ. ಜಾತಿಯನ್ನು ನೋಡಿ ಸಮಾಜವನ್ನು ಕಟ್ಟುವುದಕ್ಕಿಂತ ನೀತಿಯನ್ನು ಆಧಾರವಾಗಿಟ್ಟುಕೊಂಡು ಸಮಾಜವನ್ನು ನಿರ್ಮಿಸಬೇಕು. ಮನುಷ್ಯನನ್ನು ಮನುಷ್ಯನಂತೆ ಪ್ರೀತಿಸುವುದೇ ನಿಜವಾದ ಮಾನವ ಧರ್ಮ. ಬಸವಣ್ಣನವರು 12ನೇ ಶತಮಾನದಲ್ಲಿಯೇ ಸಾರಿದ ಕಾಯಕವೇ ಕೈಲಾಸ ಎಂಬ ತತ್ವ ಇಂದಿಗೂ ಸಮಾಜಕ್ಕೆ ದಾರಿದೀಪವಾಗಿದೆ ಎಂದು ಹೇಳಿದರು.

ಮೈಸೂರು ರಾಜಮನೆತನದ ಕೊಡುಗೆ ಸ್ಮರಣೀಯ



ಮೈಸೂರು ರಾಜಮನೆತನದ ಕೊಡುಗೆಯನ್ನು ಸ್ಮರಿಸಿದ ಸ್ವಾಮೀಜಿ, ಮೈಸೂರು ದಸರಾ ಪರಂಪರೆಯನ್ನು ರಾಜಮನೆತನದ ಇತಿಹಾಸದಿಂದ ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ. ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದನೆಗೆ ಚಾಲನೆ ನೀಡಿದ ಹಾಗೂ ರೈತರ ಬದುಕು ಹಸನಾಗಲು ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡ ಮಹನೀಯರ ಕೊಡುಗೆ ನಾಡಿನ ಪ್ರಗತಿಗೆ ಮಹತ್ವದ್ದಾಗಿದೆ. ರಾಣಿ ಕೆಂಪರಾಜಮ್ಮ ತಮ್ಮ ಆಭರಣಗಳನ್ನು ಒತ್ತೆಯಿಟ್ಟು ಅಣೆಕಟ್ಟು ನಿರ್ಮಾಣಕ್ಕೆ ನೆರವು ನೀಡಿದ ತ್ಯಾಗದ ಪರಂಪರೆ ನಮಗೆಲ್ಲ ಪ್ರೇರಣೆಯಾಗಿದೆ ಎಂದರು.

ಶಿವಕುಮಾರ ಸ್ವಾಮೀಜಿಯ ಸೇವೆ ಮಾದರಿ

ಕನ್ನಡ ನಾಡಿನ ಜನರು ಸಾಧುಸಂತರಿಗೆ ಗೌರವ ನೀಡುವವರು, ವೀರರಿಗೆ ವೀರರಾಗಿರುವವರು ಹಾಗೂ ಪ್ರೀತಿಗೆ ಪ್ರೀತಿಯಿಂದಲೇ ಪ್ರತಿಕ್ರಿಯಿಸುವವರು. ಹತ್ತು ಮಕ್ಕಳನ್ನು ಸಾಕುವುದೇ ಕಷ್ಟವಾಗಿದ್ದ ಕಾಲದಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಅನ್ನದಾಸೋಹ ನೀಡಿದ ಸಿದ್ಧಗಂಗೆಯ ಶಿವಕುಮಾರ ಸ್ವಾಮೀಜಿಯ ಸೇವೆ ಎಲ್ಲರಿಗೂ ಮಾದರಿಯಾಗಿದೆ. ಕರ್ನಾಟಕವನ್ನು ರೈತರ ಬೆವರು, ಕಾರ್ಮಿಕರ ದುಡಿಮೆ, ವಿಜ್ಞಾನಿಗಳ ಜ್ಞಾನ ಮತ್ತು ಸಾಧುಸಂತರ ಪ್ರಾರ್ಥನೆಗಳು ರೂಪಿಸಿವೆ ಎಂದು ತಿಳಿಸಿದರು.

ತಂತ್ರಜ್ಞಾನದಿಂದ ಅನ್ನವನ್ನು ಸೃಷ್ಟಿಸಲು ಸಾಧ್ಯವಿಲ್ಲ

ಇಂದು ತಂತ್ರಜ್ಞಾನ ಎಷ್ಟೇ ಮುಂದುವರಿದಿದ್ದರೂ ಎಲ್ಲವನ್ನೂ ಡೌನ್‌ಲೋಡ್ ಮಾಡಬಹುದು; ಆದರೆ ಅನ್ನ ಮತ್ತು ಸಾರನ್ನು ಡೌನ್‌ಲೋಡ್ ಮಾಡಲು ಸಾಧ್ಯವಿಲ್ಲ. ರೈತರು ಬೆಳೆದ ಬೆಳೆಗಳಿಂದಲೇ ನಮಗೆ ಆಹಾರ ದೊರೆಯುತ್ತದೆ. ಹೀಗಾಗಿ ರೈತರ ಶ್ರಮವನ್ನು ಗೌರವಿಸಿ ಕೃಷಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

ಕಾವೇರಿ, ಕೃಷ್ಣೆ, ತುಂಗಭದ್ರೆಯಂತಹ ನದಿಗಳು ಬತ್ತಿಹೋದರೆ ಜನಜೀವನ ಸಂಕಷ್ಟಕ್ಕೆ ಸಿಲುಕುತ್ತದೆ. ಆದ್ದರಿಂದ ಸರ್ಕಾರಗಳು ನದಿಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕು. ನೆಲ, ಜಲ ಮತ್ತು ಪರಿಸರವನ್ನು ರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ದೇವರ ಮುಂದೆ ಲಕ್ಷ ದೀಪಗಳನ್ನು ಹಚ್ಚುವುದರ ಜೊತೆಗೆ ಒಂದು ವೃಕ್ಷವನ್ನು ನೆಟ್ಟು ಬೆಳೆಸಿದರೆ ಅದು ಪ್ರಕೃತಿಗೆ ಸಲ್ಲಿಸುವ ನಿಜವಾದ ಸೇವೆಯಾಗುತ್ತದೆ ಎಂದು ಪರಿಸರ ಸಂರಕ್ಷಣೆಯ ಮಹತ್ವವನ್ನು ವಿವರಿಸಿದರು.

ಮೈಸೂರು ದಸರಾ ಕೇವಲ ಉತ್ಸ ವವಲ್ಲ; ಅದು ನಾಡಿನ ಸಂಸ್ಕೃತಿ, ಪರಂಪರೆ, ಮಾನವೀಯತೆ ಮತ್ತು ಸಾಮರಸ್ಯದ ಸಂಕೇತವಾಗಿದೆ. ರೈತರ ಬದುಕು ಹಸನಾಗಬೇಕು, ಪರಿಸರ ಸಂರಕ್ಷಿಸಲ್ಪಡಬೇಕು, ಶಿಕ್ಷಣ ಎಲ್ಲರಿಗೂ ದೊರೆಯಬೇಕು ಹಾಗೂ ಸಮಾಜದಲ್ಲಿ ಪ್ರೀತಿ ಮತ್ತು ಸಹಬಾಳ್ವೆ ಬೆಳೆಯಬೇಕು. ಕರ್ನಾಟಕದ ಅಭಿವೃದ್ಧಿಗೆ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡುವ ಸಂಕಲ್ಪ ಮಾಡಬೇಕು ಎಂದು ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿ ಕರೆ ನೀಡಿದರು.

3ನೇಯ ಪುಟಕ್ಕೆ

ವೆಂಕಟೇಶ್ ಗಲಗ ವರ್ಗಾವಣೆ ಆದೇಶ ಹಿಂಪಡೆಯುವಂತೆ ಒತ್ತಾಯ

ರಾಯಚೂರು

ಲೋಕೋಪಯೋಗಿ ಇಲಾಖೆ ರಾಯಚೂರು ವಿಭಾಗದ ಕಾರ್ಯಪಾಲಕ ಅಭಿಯಂತರ ವೆಂಕಟೇಶ ಗಲಗ ಅವರ ವರ್ಗಾವಣೆ ಆದೇಶವನ್ನು ತಕ್ಷಣ ಹಿಂಪಡೆದು, ಅವರನ್ನು ಅದೇ ಹುದ್ದೆಯಲ್ಲಿ ಮುಂದುವರಿಸಬೇಕು. ಇಲ್ಲದಿದ್ದರೆ ವಾಲ್ಮೀಕಿ ನಾಯಕ ಸಮಾಜದ ಸಂಘಟನೆಗಳ ಒಕ್ಕೂಟದ ವತಿಯಿಂದ ರಾಯಚೂರು ಬಂದ್‌ಗೆ ಕರೆ ನೀಡಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಮಹರ್ಷಿ ವಾಲ್ಮೀಕಿ ನಾಯಕ ಮಹಾವೇದಿಕೆಯ ಜಿಲ್ಲಾ ಕಾರ್ಯಾಧ್ಯಕ್ಷ ಶಿವಗೇನಿ ನಾಯಕ ಜಿಂಕಲ್ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.



ನಗರದ ಪತ್ರಿಕಾ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2025ರ ಮೇ 31ರಂದು ಲೋಕೋಪಯೋಗಿ ಇಲಾಖೆಗೆ ವರ್ಗಾವಣೆಯಾಗಿದ್ದ ವೆಂಕಟೇಶ ಗಲಗ ಅವರನ್ನು ಕೇವಲ 13 ತಿಂಗಳ ಅವಧಿಯಲ್ಲೇ 2026ರ ಅಕ್ಟೋಬರ್ 6ರಂದು ಮತ್ತೆ ವರ್ಗಾವಣೆ ಮಾಡಿರುವುದು ಖಂಡನೀಯ. ಅಧಿಕಾರಾವಧಿ ಪೂರ್ಣಗೊಳ್ಳುವ ಮೊದಲೇ ಆಡಳಿತಾತ್ಮಕ ಹಿತದೃಷ್ಟಿಯ ನೆಪದಲ್ಲಿ ವರ್ಗಾವಣೆ ಮಾಡಿರುವುದರ ಹಿಂದೆ ರಾಜಕೀಯ ದುರುದ್ದೇಶವಿದೆ ಎಂಬ ಅನುಮಾನ ಮೂಡಿದೆ. ಪ್ರಾಮಾಣಿಕ ಅಧಿಕಾರಿಗಳನ್ನು ಅನಗತ್ಯವಾಗಿ ವರ್ಗಾವಣೆ ಮಾಡುವ ನೀತಿಯನ್ನು ಸರ್ಕಾರ ಕೈಬಿಡಬೇಕು ಎಂದು ಆಗ್ರಹಿಸಿದರು.

ಮುಖ್ಯಮಂತ್ರಿ ಹಾಗೂ ಲೋಕೋಪಯೋಗಿ ಸಚಿವರು ಕೂಡಲೇ ಮಧ್ಯಪ್ರವೇಶಿಸಿ ವರ್ಗಾವಣೆ ಆದೇಶವನ್ನು ರದ್ದುಗೊಳಿಸಬೇಕು. ಇಲ್ಲವಾದರೆ ತಾಲೂಕು ಮತ್ತು ಜಿಲ್ಲಾಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗುವುದು. ಮುಂದಿನ ಹಂತದಲ್ಲಿ ಜಿಲ್ಲೆಯ ಎಲ್ಲ ವಾಲ್ಮೀಕಿ ನಾಯಕ ಸಂಘಟನೆಗಳನ್ನು ಒಗ್ಗೂಡಿಸಿ ರಾಯಚೂರು ಬಂದ್‌ಗೆ ಕರೆ ನೀಡಲಾಗುವುದು ಎಂದು ಎಚ್ಚರಿಸಿದರು.

ಇತರ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಒತ್ತಾಯ:

ಜಿಲ್ಲೆಯಲ್ಲಿ ವಿವಿಧ ಅಧಿಕಾರಿಗಳ ವಿರುದ್ಧ ಅಕ್ರಮ ಮತ್ತು ಕರ್ತವ್ಯಲೋಪದ ಆರೋಪಗಳು ಕೇಳಿಬಂದಿದ್ದರೂ ಕ್ರಮ ಕೈಗೊಳ್ಳದಿರುವುದೇಕೆ ಎಂದು ಪ್ರಶ್ನಿಸಿದ ಶಿವಗೇನಿ ನಾಯಕ, ಅರಕೇರಾ ಮತ್ತು ಸಿರವಾರ ತಾಲೂಕು ಪಂಚಾಯಿತಿಗಳ ಅಧಿಕಾರಿಗಳು, ಅರಕೇರಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಇತರ ಅಧಿಕಾರಿಗಳ ವಿರುದ್ಧ ಕೇಳಿಬಂದಿರುವ ಆರೋಪಗಳ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮಾನ್ವಿ ತಾಲೂಕು ವ್ಯಾಪ್ತಿಯ ಪೊಲೀಸ್ ಅಧಿಕಾರಿ ಸೋಮಶೇಖರ್ ಎಸ್. ಕೆಂಚರಡ್ಡಿ ಅವರ ವಿರುದ್ಧದ ಆರೋಪಗಳ ಬಗ್ಗೆಯೂ ತನಿಖೆ ನಡೆಸಬೇಕು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಆಪ್ತ ಸಹಾಯಕರ ವರ್ಗಾವಣೆ ವಿಚಾರ ಸೇರಿದಂತೆ ವಿವಿಧ ಆಡಳಿತಾತ್ಮಕ ವಿಷಯಗಳ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಅಜಯ್ ಧರ್ಮಸಿಂಗ್ ಅವರು ಈ ಎಲ್ಲ ವಿಚಾರಗಳಿಗೆ ಉತ್ತರಿಸಬೇಕು. ವೆಂಕಟೇಶ ಗಲಗ ಅವರ ವರ್ಗಾವಣೆ ಆದೇಶ ಹಿಂಪಡೆಯದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಹಾವೇದಿಕೆಯ ಜಿಲ್ಲಾಧ್ಯಕ್ಷ ವೆಂಕಟೇಶ್ ಗೌಡ ಪಾಟೀಲ್, ಜೇಮ್ಸ್ ಹಾಗೂ ಅನಿಲ್ ಕುಮಾರ್ ಉಪಸ್ಥಿತರಿದ್ದರು.

ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸವ: ಅ.18ರಂದು ಪತ್ರಕರ್ತರ ಜಿಲ್ಲಾ ಮಟ್ಟದ ಗಾಯನ ಸ್ಪರ್ಧೆ

ರಾಯಚೂರು

ರಾಯಚೂರು ರಿಪೋರ್ಟರ್ಸ್ ಗಿಲ್ಡ್‌ನ ಬೆಳ್ಳಿ ಮಹೋತ್ಸ ವದ ಅಂಗವಾಗಿ ಅಕ್ಟೋಬರ್ 18ರಂದು ಬೆಳಿಗ್ಗೆ 10 ಗಂಟೆಗೆ ನಗರದ ಪತ್ರಿಕಾ ಭವನದಲ್ಲಿ ಪತ್ರಕರ್ತರಿಗಾಗಿ ಜಿಲ್ಲಾ ಮಟ್ಟದ ಗಾಯನ ಸ್ಪರ್ಧೆ ಆಯೋಜಿಸಲಾಗಿದೆ.

ಕನ್ನಡ ಚಲನಚಿತ್ರ ಗೀತೆ, ಭಾವಗೀತೆ, ಹಿಂದಿ ಚಲನಚಿತ್ರ ಗೀತೆ ಹಾಗೂ ತೆಲುಗು ಚಲನಚಿತ್ರ ಗೀತೆ ಸೇರಿದಂತೆ ಆಸಕ್ತ ಪತ್ರಕರ್ತರು ಅಕ್ಟೋಬರ್ 15ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು.

ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದವರಿಗೆ ಆಕರ್ಷಕ ಟ್ರೋಫಿ ಹಾಗೂ ಪ್ರಮಾಣಪತ್ರ ನೀಡಿ ಗೌರವಿಸಲಾಗುವುದು.

ಆಸಕ್ತರು ಗಿಲ್ಡ್ ಬೆಳ್ಳಿ ಮಹೋತ್ಸ ವ ಸಾಂಸ್ಕೃತಿಕ ಸಮಿತಿಯ ಪ್ರಮುಖರಾದ ಚಂದ್ರಕಾಂತ ಮಸಾನಿ (99726 69369), ಖಾನಸಾಬ್ ಮೋಮಿನ್ (7022265311), ಸತ್ಯನಾರಾಯಣ (99868 59891) ಹಾಗೂ ಚನ್ನಬಸವ (99452 08017) ಅವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದು.

ಗಾಯನ ಸ್ಪರ್ಧೆಯಲ್ಲಿ ಜಿಲ್ಲೆಯ ಪತ್ರಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಗಿಲ್ಡ್ ಅಧ್ಯಕ್ಷ ವಿಜಯ ಜಾಗಟಗಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯರಾಗಿ ರಾಯಚೂರಿನ ನರಸಪ್ಪ ಯಕ್ಲಾಸಪೂರ ನೇಮಕ

ರಾಯಚೂರು

ಭಾರತೀಯ ಜನತಾ ಪಕ್ಷದ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯ ಕಾರ್ಯಕಾರಿಣಿ ಸದಸ್ಯರಾಗಿ ರಾಯಚೂರಿನ ನರಸಪ್ಪ ಯಕ್ಲಾಸಪೂರ ಅವರನ್ನು ನೇಮಕ ಮಾಡಲಾಗಿದೆ.



ಈ ಕುರಿತು ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್. ರಘು (ಕೌಟಿಲ್ಯ) ಅವರು ನೇಮಕಾತಿ ಪತ್ರ ನೀಡಿದ್ದಾರೆ.

ಪಕ್ಷದ ಹೊಣೆಗಾರಿಕೆಯನ್ನು ಅತ್ಯಂತ ಜವಾಬ್ದಾರಿಯುತವಾಗಿ ನಿರ್ವಹಿಸುತ್ತಾ ಪಕ್ಷದ ಸಂಘಟನೆಯನ್ನು ತಳಮಟ್ಟದಲ್ಲಿ ಸದೃಢಗೊಳಿಸುತ್ತಾ, ಲೋಕಸಭಾ ಚುನಾವಣೆ ಸೇರಿದಂತೆ ಇತರ ಚುನಾವಣೆಗಳಲ್ಲಿ ಪಕ್ಷವು ಜಯಭೇರಿ ಭಾರಿಸಲು ಸಮರ್ಪಣಾ ಮನೋಭಾವದಿಂದ ಶ್ರಮಿಸುವಂತೆ ಅವರು ಪತ್ರದಲ್ಲಿ ಆಶಿಸಿದ್ದಾರೆ.



ಗಣೇಶ ವಿಸರ್ಜನೆ ದುರಂತ: ಮೃತ ಮಕ್ಕಳ ಕುಟುಂಬಗಳಿಗೆ ಪರಿಹಾರ, ಉದ್ಯೋಗಕ್ಕೆ ಆಗ್ರಹ

ರಾಯಚೂರು: ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆಯಲ್ಲಿ ಟ್ರ್ಯಾಕ್ಟರ್‌ನಿಂದ ಬಿದ್ದು ಇಬ್ಬರು ಅಪ್ರಾಪ್ತ ಮಕ್ಕಳು ಮೃತಪಟ್ಟಿದ್ದು, ಮತ್ತೊಬ್ಬ ಬಾಲಕ ಗಾಯಗೊಂಡಿರುವ ಘಟನೆಗೆ ಸಂಬಂಧಿಸಿದಂತೆ ಸಂತ್ರಸ್ತ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು ಹಾಗೂ ಮೂರು ಕುಟುಂಬಗಳ ಸದಸ್ಯರಿಗೆ ಮಹಾನಗರ ಪಾಲಿಕೆಯಲ್ಲಿ ಉದ್ಯೋಗ ಕಲ್ಪಿಸಬೇಕು ಎಂದು ದಮನಿತ ಸೇನಾ ಸಮಿತಿ (ಡಿಎಸ್‌ಎಸ್) ಜಿಲ್ಲಾಧ್ಯಕ್ಷ ಎಂಬ ಭರತ್ ಕುಮಾರ್ ಒತ್ತಾಯಿಸಿದ್ದಾರೆ.

3ನೇಯ ಪುಟಕ್ಕೆ

ಹೋರಾಟಗಾರರ ಬಂಧನ ಖಂಡಿಸಿ ಪಂಜಿನ ಮೆರವಣಿಗೆ

ರಾಯಚೂರು,ಅ.11-

ದೆಹಲಿಯ ಜಂತರ್ ಮಂತರ್ ನಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ ಹೋರಾಟಗಾರರ ಬಂಧನ ಖಂಡಿಸಿ ಮತಕಾವಲು ಸಮಿತಿ ಹಾಗೂ ಎಸ್ ಐಆರ್ ವಿರೋಧಿ ಸಮಿತಿಯಿಂದ ನಗರದ ತೀನ್ ಖಂದಿಲ್ ವೃತ್ತದಿಂದ ಡಾ.ಬಿ. ಆರ್.ಅಂಬೇಡ್ಕರ್ ವೃತ್ತದವರೆಗೆ ಶನಿವಾರ ಪಂಜಿನ ಮೆರವಣಿಗೆ ನಡೆಸಲಾಯಿತು.



ಈ ವೇಳೆ ಮಾತನಾಡಿ ದ ಮುಖಂಡ ಕೆ.ಜಿ.ವೀರೇಶಪ್ರಧಾನಿ ಮೋದಿ, ಅಮಿತ್ ಷಾ ಈ ದೇಶವನ್ನು ಸರ್ವಾಧಿಕಾರಿಯತ್ತ ಕೊಂಡೊಯ್ಯುತ್ತಿದ್ದಾರೆ. ಸಂವಿಧಾನದಿಂದ ನೀಡಿದ ಮತದಾನದ ಹಕ್ಕು ಕಸಿದು ಕೊಳ್ಳಲಾಗುತ್ತಿದ್ದು ಇದರ ವಿರುದ್ಧ ಹೋರಾಡುವ ಯುವಕರನ್ನು ಹೋರಾಟಗಾರರನ್ನು, ವರದಿಗಾರ'ರನ್ನು, ವಕೀಲರನ್ನು ಬಿಡದೇ ಸಿಕ್ಕ ಸಿಕ್ಕಲ್ಲಿ ಬಂಧಿಸುವ ಮೂಲಕ ಅರಾಜಕತೆ ಸೃಷ್ಟಿಸುತ್ತಿದೆ. ಎಸ್ ಐ ಆರ್ ವಿರುದ್ಧ ಇಡೀ ದೇಶದಲ್ಲಿ ವಿರೋಧ ವ್ಯಕ್ತವಾಗಿದ್ದು ದೆಹಲಿಯ ಜಂತರ್ ಮಂತರ್ ನಲ್ಲಿ ಹೋರಾಟಕ್ಕೆ ಹೋಗುವವರನ್ನು ವಿಮಾನ'ದಲ್ಲಿ, ರೈಲಿನಲ್ಲಿ, ಕಚೇರಿಯಲ್ಲಿಯೇ ಪೊಲೀಸರು ಬಂಧಿಸಿದ್ದು ಖಂಡನಾರ್ಹ. ಚುನಾವಣೆ ಆಯೋಗದ ಬಿಜೆಪಿ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ ಈಗಲೇ ರಾಜೀನಾಮೆ ನೀಡದಿದ್ದರೆ ಬೀದಿ ಬೀದಿಗಳಲ್ಲಿ ನಿರಂತರವಾಗಿ ದೊಡ್ಡ ಮಟ್ಟದ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಾರೆಪ್ಪ ಹರವಿ, ಎಸ್ ಡಿಪಿಐನ ಜಿಲ್ಲಾ ಮುಖಂಡ ಮೊಹಮ್ಮದ್ ಅತೀಕ್, ಎಸ್ ಐಆರ್ ವಿರೋಧಿ ಹೋರಾಟ ಸಮಿತಿಯ ಅಂಜನೇಯ ಕುರುಬದೊಡ್ಡಿ ಖಾಜಾ ಅಸ್ಲಂ ಅಹ್ಮದ್, ಮೊಹಮ್ಮದ್ ಮುಸ್ತಾಕ್, ಜಮಾತೆ ಇಸ್ಲಾಂ ಹಿಂದ್ ಸ್ಥಾನಿಕ ಅಧ್ಯಕ್ಷ ಅಸಿಮುದ್ದೀನ್ ಅಖರ ಡಿ.ಎಸ್.ಶರಣಬಸವ, ಶರಣಪ್ಪ ಮಹೇಶ ಚೀಕಲಪರ್ವಿ, ಜಾನ್ ವೆಸ್ಲಿ ಎಸ್‌ಡಿಪಿಐ ಮುಖಂಡರಾದ ಅಕ್ಬರ್ ನಾಗುಂಡಿ, ತೌಸೀಫ್ ಅಹದ್, ಮತೀನ್ ಅನ್ಸಾರಿ, ಖಾಜಾ ಮೊಹಿನುದ್ದೀನ್ ಮತ್ತಿತರರು ಭಾಗವಹಿಸಿದ್ದರು.

ಸಾಂಸ್ಕೃತಿಕ ನಗರಿಯನ್ನು ಬ್ರ್ಯಾಂಡ್ ಮೈಸೂರು ಮಾಡುತ್ತೇವೆ : ದಸರಾ ಉದ್ಘಾಟನೆ ವೇಳೆ ಸಿಎಂ ಡಿಕೆಶಿ ಘೋಷಣೆ

ಮೈಸೂರು,ಅ.11- ಸಾಂಸ್ಕೃತಿಕ ನಗರಿಯನ್ನು ಬ್ರ್ಯಾಂಡ್ ಮೈಸೂರನ್ನಾಗಿ ಪರಿವರ್ತಿಸಲು ಉದ್ದೇಶಿಸಿರುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ದಸರಾ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರು ರೇಷ್ಮೆ, ಮೈಸೂರು ಸ್ಯಾಂಡಲ್ ಸೋಪು ಮೊದಲಾದವು ಜನಪ್ರಿಯವಾಗಿವೆ. ಮೈಸೂರಿಗೆ ಒಂದು ಬ್ರ್ಯಾಂಡ್ ತಂದು ಕೊಡುವ ಉದ್ದೇಶ ಇದೆ ಎಂದು ಹೇಳಿದರು. ಆದಾಯ ಪಾತಾಳಕ್ಕೆ ಕುಸಿದಿದ್ದು, ಬೆಲೆಗಳು ಆಕಾಶಕ್ಕೆ ಏರಿಕೆಯಾಗುತ್ತಿವೆ. ಇಂತಹ ಸಂದರ್ಭದಲ್ಲಿ ರಾಜ್ಯ ತೀವ್ರ ಬರ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ರಾಜ್ಯಕ್ಕೆ ಈಗ ಜಲ ಭಿಕ್ಷೆಯ ಅನಿವಾರ್ಯತೆ ಇದೆ ಎಂದರು.

ಪರಂಪರೆಯ ಪ್ರತೀಕವಾಗಿ ಕಂಬಳವನ್ನು ಈ ವರ್ಷ ಮೈಸೂರು ದಸರಾ ಆಚರಣೆ ಸಂದರ್ಭದಲ್ಲಿ ಪ್ರಾರಂಭಿಸಿರುವುದಾಗಿ ಅವರು ಸಮರ್ಥಿಸಿಕೊಂಡರು. ನವದುರ್ಗೆಯರ ಆಶೀರ್ವಾದ ನಾಡಿನ ಮೇಲಿರಲಿ. ರಾಜ್ಯದ ಕೋಟ್ಯಂತರ ಜನರ, ತಾಯಂದಿರ ಆಶೀರ್ವಾದ ನಮ ಸರ್ಕಾರದ ಮೇಲಿರಲಿ. ದೇವಿಯ ಕೃಪೆ ಜನತೆಯ ಮೇಲಿರಲಿ. ಜನರ ಕೃಪೆ ನಮ ಮೇಲಿರಲಿ ಎಂದು ಹೇಳಿದರು.

ದಸರಾ ಕೇವಲ ಆಚರಣೆಯಲ್ಲ. ಅದು ನಮ ಪರಂಪರೆ, ಸಂಸ್ಕೃತಿಯ ಪ್ರತೀಕ. ಶ್ರೀಗಳನ್ನು ದೇವರ ಸಮಾನವಾದ ಶಕ್ತಿ ಉಳ್ಳವರೆಂದು ಭಾವಿಸುತ್ತೇನೆ. ಈ ವಿಚಾರದಲ್ಲಿ ತಪ್ಪು ಅಭಿಪ್ರಾಯ ಇರಬಾರದು ಎಂದು ಸಿಎಂ ತಿಳಿಸಿದರು.

ನನ್ನ ಬದುಕಿನಲ್ಲಿ ಇಂದು ಸರಣೀಯ ದಿನ. ಹೊಸ ಅಧ್ಯಾಯ, ಪೂರ್ವಜನದ ಪುಣ್ಯದ ಫಲದಿಂದ ಮುಖ್ಯಮಂತ್ರಿಯಾಗಿ ನಾಡಹಬ್ಬ ದಸರಾ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತಾಗಿದೆ. ನಮ ಸರ್ಕಾರ ಸಮಾನತೆಯ ಜ್ಯೋತಿಯನ್ನು ಬೆಳಗುತ್ತದೆ. ಸಮಾನತೆಯಿಂದ ಶಾಂತಿ ಸಾಧ್ಯವಾಗುತ್ತದೆ. ಅಧರ್ಮದ ಮುಳ್ಳನ್ನು ಧರ್ಮದಿಂದ ತೆಗೆಯಲಾಗುತ್ತದೆ ಎಂದು ತಿಳಿಸಿದರು.

ವಿಜಯನಗರ ಅರಸರು ದಸರಾ ಪರಂಪರೆಗೆ ನಾಂದಿ ಹಾಡಿದರು. ಅದನ್ನು ಮೈಸೂರು ಅರಸರು ಮುಂದುವರೆಸಿಕೊಂಡು ಬಂದರು. ರಾಜ್ಯ ಸರ್ಕಾರವು ಅದನ್ನು ಮುಂದುವರೆಸುತ್ತಾ ಬಂದಿದೆ. ಮನೆಗಳಲ್ಲಿ ಗೊಂಬೆ ಇಟ್ಟು ದಸರಾ ಆಚರಣೆ ಮಾಡಲಾಗುತ್ತದೆ. ವೈವಿಧ್ಯಮಯ ಕಲಾ ಪ್ರಕಾರಗಳು ಪ್ರವಾಸಿಗರನ್ನು ಮೈಸೂರು ದಸರಾಕ್ಕೆ ಸೆಳೆಯುತ್ತವೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಅನೇಕ ಕಲಾವಿದರು ಕರ್ನಾಟಕದ ಸಂಸ್ಕೃತಿಯನ್ನು ಜೀವಂತವಾಗಿಟ್ಟು ಬೆಳೆಸುತ್ತಾ ಬಂದಿದ್ದಾರೆ. ವಿವಿಧ ಮಠಾಧೀಶರು ನಾಡಿಗೆ, ಸರ್ಕಾರಕ್ಕೆ

3ನೇಯ ಪುಟಕ್ಕೆ



ಸುರಪುರ ಗಾಂಧಿ ಸ್ಮೃತಿ ಜನಜಾಗೃತಿ ಜಾಥಾ: ನಶೆ ಮುಕ್ತರಿಗೆ ಸನ್ಮಾನ



ಯಾದಗಿರಿ,ಅ.11-

ಮೊಬೈಲ್ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸದೆ ಸಮಸ್ತ ಹಾಗೂ ಇತರ ಆ್ಯಪ್‌ಗಳಲ್ಲಿ ಆನ್‌ಲೈನ್ ಕೆಲಸ ಮಾಡುವಂತೆ ಆಶಾ ಕಾರ್ಯಕರ್ತೆಯರನ್ನು ಒತ್ತಾಯಿಸುವುದನ್ನು ನಿಲ್ಲಿಸಬೇಕು. ಮಾಸಿಕ ಗೌರವಧನ ಹಾಗೂ ಪ್ರೋತ್ಸಾ ಹಧನವನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನೂರಾರು ಆಶಾ ಕಾರ್ಯಕರ್ತೆಯರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಎಐಯುಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಯಾದಗಿರಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಶುಕ್ರವಾರ ನಡೆದ ಪ್ರತಿಭಟನೆಯಲ್ಲಿ, ಆಶಾ ಕಾರ್ಯಕರ್ತೆಯರ ಸಮಸ್ಯೆಗಳನ್ನು ಪರಿಹರಿಸುವಂತೆ ಸರ್ಕಾರ ಹಾಗೂ ಆರೋಗ್ಯ ಇಲಾಖೆಯನ್ನು ಒತ್ತಾಯಿಸಲಾಯಿತು.

ಇಲಾಖೆಯ ಆದೇಶದಂತೆ ಪ್ರತಿ ತಿಂಗಳು ₹5,000 ಗೌರವಧನ, ₹2,000 ಮಾಸಿಕ ಪ್ರೋತ್ಸಾ ಹಧನ ಹಾಗೂ ₹1,000 ಟಿಬಿಐ ಪ್ರೋತ್ಸಾ ಹಧನವನ್ನು ಯಾವುದೇ ಕಡಿತವಿಲ್ಲದೆ ಪಾವತಿಸಬೇಕು. ಜಿಲ್ಲೆಯಲ್ಲಿ ಬಾಕಿ ಉಳಿದಿರುವ ಗೌರವಧನ ಮತ್ತು ಪ್ರೋತ್ಸಾ ಹಧನವನ್ನು ಕೂಡಲೇ ಬಿಡುಗಡೆ ಮಾಡಬೇಕು. ಪ್ರತಿ ತಿಂಗಳು ಕಾರ್ಯಕರ್ತೆಯರಿಗೆ ಕ್ಲೈಂ ಮತ್ತು ಸ್ಯಾಂಕ್ಷನ್ ಚೀಟಿಯ ಪ್ರತಿಯನ್ನು ವೇತನ ಚೀಟಿಯಾಗಿ ಕಡ್ಡಾಯವಾಗಿ ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಆಶಾ ಕಾರ್ಯಕರ್ತೆಯರು ನಿರ್ವಹಿಸಿದ ಎಲ್ಲ ಚಟುವಟಿಕೆಗಳಿಗೆ ನಿಗದಿತ ಪ್ರೋತ್ಸಾ ಹಧನ ದೊರೆಯುವಂತೆ ಕ್ರಮ ಕೈಗೊಳ್ಳಬೇಕು. ಮಾಸಿಕ ಗೌರವಧನ ಮತ್ತು ಪ್ರೋತ್ಸಾ ಹಧನ ಯಾವ ತಿಂಗಳಿಗೆ ಸಂಬಂಧಿಸಿದ್ದು ಎಂಬ ಮಾಹಿತಿ ತಿಳಿಯಲು ಬ್ಯಾಂಕ್ ಪಾಸ್‌ಬುಕ್‌ನಲ್ಲಿ ತಿಂಗಳ ವಿವರ ಮುದ್ರಣವಾಗುವ ವ್ಯವಸ್ಥೆ ಮಾಡಬೇಕು. ಅಲ್ಲದೆ, ಹತ್ತು ವರ್ಷ ಸೇವೆ ಸಲ್ಲಿಸಿ ಕೆಲಸ ತೊರೆದವರು ಹಾಗೂ ನಿವೃತ್ತರಾದ ಕಾರ್ಯಕರ್ತೆಯರಿಗೆ ನೀಡಬೇಕಾದ ಪರಿಹಾರ ಮೊತ್ತವನ್ನು ತಕ್ಷಣ ಪಾವತಿಸಬೇಕು ಎಂದು ಒತ್ತಾಯಿಸಿದರು.

ರೋಗಿಗಳ ಕಫದ ಮಾದರಿಯನ್ನು ಸಂಗ್ರಹಿಸಿ ತರುವುದು ಆಶಾ ಕಾರ್ಯಕರ್ತೆಯರ ಕೆಲಸವಲ್ಲದಿದ್ದರೂ, ಪ್ರತಿ ತಿಂಗಳು ಐದರಿಂದ ಹತ್ತು ರೋಗಿಗಳ ಕಫದ ಮಾದರಿ ತರಲೇಬೇಕೆಂದು ಒತ್ತಾಯಿಸಲಾಗುತ್ತಿದೆ. ಇಂತಹ ಒತ್ತಡವನ್ನು ನಿಲ್ಲಿಸಬೇಕು. ಮೊಬೈಲ್ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸದೆ ಸಮಸ್ತ ಹಾಗೂ ಇತರ ಆ್ಯಪ್‌ಗಳಲ್ಲಿ ಆನ್‌ಲೈನ್ ಕೆಲಸ ಮಾಡುವಂತೆ ಒತ್ತಾಯಿಸಬಾರದು ಎಂದು ಆಗ್ರಹಿಸಿದರು.

ಮಾಸಿಕ ₹15 ಸಾವಿರ ಗೌರವಧನಕ್ಕೆ ಆಗ್ರಹ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗೌರವಧನ ಹಾಗೂ ವಿವಿಧ ಪ್ರೋತ್ಸಾ ಹಧನಗಳನ್ನು ಪ್ರತ್ಯೇಕವಾಗಿ ಪಾವತಿಸುತ್ತಿರುವುದರಿಂದ ಪ್ರತಿ ತಿಂಗಳು ಹಣ ಪಾವತಿಯಲ್ಲಿ ಹಲವು ಸಮಸ್ಯೆಗಳು ಎದುರಾಗುತ್ತಿವೆ. ಹೀಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನೀಡುವ ಗೌರವಧನ ಹಾಗೂ ಪ್ರೋತ್ಸಾ ಹಧನಗಳನ್ನು ಒಟ್ಟುಗೂಡಿಸಿ ಮಾಸಿಕ ₹15 ಸಾವಿರ ಗೌರವಧನ ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

ಈ ಕುರಿತು ಮಾತನಾಡಿದ ಸಂಘದ ರಾಜ್ಯ ಉಪಾಧ್ಯಕ್ಷ ವಿ.ಜಿ. ದೇಸಾಯಿ ಮತ್ತು ಜಿಲ್ಲಾ ಅಧ್ಯಕ್ಷೆ ಡಿ. ಉಮಾದೇವಿ, ಯಾದಗಿರಿ ಜಿಲ್ಲೆಯಲ್ಲಿ ಆಶಾ ಕಾರ್ಯಕರ್ತೆಯರಿಗೆ ಮಾಸಿಕ ಗೌರವಧನ ಹಾಗೂ ಪ್ರೋತ್ಸಾ ಹಧನ ಸಕಾಲದಲ್ಲಿ ಪಾವತಿಯಾಗುತ್ತಿಲ್ಲ. ಇದರಿಂದ ಕಾರ್ಯಕರ್ತೆಯರು ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ. ಮೂಲಸೌಕರ್ಯಗಳನ್ನು ಒದಗಿಸದೆ ಆನ್‌ಲೈನ್ ಕೆಲಸಕ್ಕೆ ಒತ್ತಾಯಿಸುತ್ತಿರುವುದನ್ನು ಇಲಾಖೆ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ರಾಜ್ಯ ಮಟ್ಟದ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಕ್ಟೋಬರ್ 5ರಿಂದ 11ರವರೆಗೆ ರಾಜ್ಯಾದ್ಯಂತ ಪ್ರತಿಭಟನಾ ಸಪ್ತಾಹ ಆಚರಿಸಲು ಸಂಘ ಕರೆ ನೀಡಿದೆ. ಇದರ ಭಾಗವಾಗಿ ಯಾದಗಿರಿಯಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಬಾಕಿ ಹಣ ಪಾವತಿಗೆ ಡಿಎಚ್‌ಒ ಭರವಸೆ

ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಮಹೇಶ್ ಬಿರಾದಾರ್, ಜಿಲ್ಲೆಯಲ್ಲಿ ಗೌರವಧನ ಹಾಗೂ ಪ್ರೋತ್ಸಾ ಹಧನ ಪಾವತಿಯಲ್ಲಿ ವಿಳಂಬವಾಗಿರುವುದನ್ನು ಒಪ್ಪಿಕೊಂಡು, ಇನ್ನೊಂದು ಅಥವಾ ಎರಡು ದಿನಗಳಲ್ಲಿ ಎಲ್ಲರಿಗೂ ಹಣ ಪಾವತಿಸುವುದಾಗಿ ಭರವಸೆ ನೀಡಿದರು.

ಆನ್‌ಲೈನ್ ಕೆಲಸ ಮಾಡಲು ಒತ್ತಾಯಿಸುವುದಿಲ್ಲ ಎಂದೂ ತಿಳಿಸಿದರು. ರಾಜ್ಯ ಮಟ್ಟದ ಬೇಡಿಕೆಗಳ ಕುರಿತು ಆರೋಗ್ಯ ಸಚಿವರ ಕಚೇರಿಗೆ ಪತ್ರ ಕಳುಹಿಸಲಾಗುವುದು ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಸಂಘದ ರಾಜ್ಯ ಉಪಾಧ್ಯಕ್ಷ ವಿ.ಜಿ. ದೇಸಾಯಿ, ಜಿಲ್ಲಾ ಅಧ್ಯಕ್ಷೆ ಡಿ. ಉಮಾದೇವಿ, ಉಪಾಧ್ಯಕ್ಷೆ ಪುಷ್ಪಲತಾ, ಕಾರ್ಯದರ್ಶಿ ದೇವಕಿ, ಸಹ ಕಾರ್ಯದರ್ಶಿ ಅಶ್ವಿನಿ ಗಣಾಚಾರಿ, ತಾಯಮ್ಮ, ಶಾಂತಮ್ಮ, ಶಿವಮೊಗ್ಗಮ್ಮ, ಅನಿತಾ ತಂಬಾಕೆ, ಗೀತಾ, ವಿಜಯಲಕ್ಷ್ಮಿ, ಕೃಪಾ, ದಾನಮ್ಮ, ಇಂದ್ರಮ್ಮ, ಚಂದಮ್ಮ, ರಾಜೇಶ್ವರಿ ಸೇರಿದಂತೆ ನೂರಾರು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.



ಕಾಳಗಿ: ಕುಡಿಯುವ ನೀರಿಗಾಗಿ ಸುಂತಾಣ ತಾಂಡದ ಜನರ ಪರದಾಟ

ಕಾಳಗಿ,ಅ.11-

ತಾಲೂಕಿನ ಕೋಡ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಸುಂತಾಣ ಬಡಾ ತಾಂಡದಲ್ಲಿ ಕಳೆದ ವಾರದಿಂದ ಕುಡಿಯುವ ನೀರಿನ ಸಮಸ್ಯೆ ತಲೆದೋರಿದ್ದು, ಒಂದು ಕೊಡ ನೀರಿಗಾಗಿ ಮೂರು ಕಿ.ಮೀ ದೂರದ ಸುಂತಾಣ ಗ್ರಾಮಕ್ಕೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸುಂತಾಣ ಬಡಾ ತಾಂಡದಲ್ಲಿ ಸುಮಾರು 300ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದ್ದು, ತಾಂಡಕ್ಕೆ ಹುಲಸಗೂಡ ಕ್ರಾಸ್ ನಿಂದ ಕುಡಿಯುವ ನೀರಿನ ಸಂಪರ್ಕ ವ್ಯವಸ್ಥೆ ಇದೆ.

ಆದರೆ ಕಳೆದ ವಾರದ ಹಿಂದೆ ಕುಡಿಯುವ ನೀರಿನ ಪೈಪ್ ಲೈನ್ ಒಡೆದು ಹೋದ ಕಾರಣ ನೀರಿನ ಸಮಸ್ಯೆ ಉಂಟಾಗಿದೆ ಎಂದು ತಾಂಡ ನಿವಾಸಿಗಳು ತಮ್ಮ ಅಳಲನ್ನು ತೋಡಿಕೊಂಡರು.

ತಾಂಡಾದಲ್ಲಿ ಮೂರು ಕುಡಿಯುವ ನೀರಿನ ಬೋರವೆಲ್ ಸಂಪರ್ಕ ಸ್ಥಳಗಳಿದ್ದರೂ ಒಂದರಲ್ಲೂ ಮೋಟಾರ್ ಇಲ್ಲದಿರುವುದರಿಂದ ನೀರು ಬರುತ್ತಿಲ್ಲ. ಇದರಿಂದ ಸುಡು ಬಿಸಿಲಿನಲ್ಲಿ ಜನರಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಸಿಗದೇ ದಿನನಿತ್ಯ ಹೈರಾಣಾಗುತ್ತಿದ್ದಾರೆ.

ಎಂಟು ದಿನಗಳಿಂದ ಕುಡಿಯುವ ನೀರಿನ ಸಮಸ್ಯೆ ಉಂಟಾದರೂ ಅಧಿಕಾರಿಗಳು ಸಮಸ್ಯೆ ಬಗೆಹರಿಸಿಲ್ಲ, ದಿನ ಬೆಳಗಾದರೆ 3ಕಿ.ಮೀ ದೂರದಿಂದ ಕುಡಿಯುವ ನೀರು ಹೊತ್ತು ಪರಿಸ್ಥಿತಿ ನಿರ್ಮಾಣವಾಗಿದೆ. ನೀರಿನ ಸಮಸ್ಯೆ ಬಗೆಹರಿಸದಿದ್ದರೆ ಗ್ರಾಪಂ ಬೀಗ ಜಡಿಯಲಾಗುವುದು ಎಂದು ಲಕ್ಷ್ಮೀ ಸಂತೋಷ ರಾಠೋಡ ಅವರು ಹೇಳಿದ್ದಾರೆ.

ಸುಂತಾಣ ಬಡಾ ತಾಂಡದ ಕುಡಿಯುವ ನೀರಿನ ಸಮಸ್ಯೆ ಗಮನಕ್ಕೆ ಬಂದಿದ್ದು ಶೀಘ್ರವೇ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಾಗುವುದು ಎಂದು ಕಾಳಗಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಡಾ. ಬಸಲಿಂಗಪ್ಪ ಡಿಗ್ಗಿ ಹೇಳಿದ್ದಾರೆ.



ಕಲಬುರಗಿ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಸಿಐಟಿಯು ಪ್ರತಿಭಟನೆ

ಕಲಬುರಗಿ,ಅ.11-

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಹಾಗೂ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ವಿರೋಧಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಜಿಲ್ಲಾ ಘಟಕದ ವತಿಯಿಂದ ನಗರದ ಜಗತ್ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾಕಾರರು ಮಾತನಾಡಿ, ದೇಶಾದ್ಯಂತ ನಡೆಯುತ್ತಿರುವ ಈ ಹೋರಾಟ ಚುನಾವಣಾ ವ್ಯವಸ್ಥೆಯ ಪಾವಿತ್ರ್ಯ, ಪ್ರಜಾಪ್ರಭುತ್ವ ಮತ್ತು ಸಂವಿಧಾನದ ರಕ್ಷಣೆಗಾಗಿ ನಡೆಯುತ್ತಿದೆ ಎಂದು ಹೇಳಿದರು.

ಎಸ್‌ಐಆರ್ ಪ್ರಕ್ರಿಯೆಯಿಂದ ಬಡವರು, ದಲಿತರು ಹಾಗೂ ಅಲ್ಪಸಂಖ್ಯಾತರು ಮತದಾನದ ಹಕ್ಕಿನಿಂದ ವಂಚಿತರಾಗುವ ಆತಂಕ ಇದೆ. ಚುನಾವಣಾ ಆಯೋಗವು ಸ್ವತಂತ್ರವಾಗಿ ಮತ್ತು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕು. ಆದರೆ, ಇತ್ತೀಚಿನ ಬೆಳವಣಿಗೆಗಳು ಆಯೋಗದ ಕಾರ್ಯವೈಖರಿ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿವೆ ಎಂದು ಆರೋಪಿಸಿದರು.

ಚುನಾವಣಾ ಆಯೋಗದ ವಿರುದ್ಧ ದೇಶಾದ್ಯಂತ ಪ್ರತಿಭಟನೆಗಳು ನಡೆಯುತ್ತಿದ್ದರೂ ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಟೀಕಿಸಿದ ಅವರು, ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಮೌಲ್ಯಗಳ ರಕ್ಷಣೆಗಾಗಿ ಹೋರಾಟ ಮುಂದುವರಿಸುವುದಾಗಿ ಎಚ್ಚರಿಸಿದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಬೇಕು ಹಾಗೂ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು. ಎಸ್‌ಐಆರ್ ಪ್ರಕ್ರಿಯೆಯನ್ನು ತಡೆಹಿಡಿದು, ಅದರಲ್ಲಿನ ಅಕ್ರಮಗಳ ಕುರಿತು ಸ್ವತಂತ್ರ ತನಿಖೆ ನಡೆಸಬೇಕು, ಮುಂಬರುವ ಚುನಾವಣೆಗಳನ್ನು ಸ್ಥಗಿತಗೊಳಿಸಿ, 2025ರ ಜನವರಿಯಲ್ಲಿದ್ದ ಮತದಾರರ ಪಟ್ಟಿಯನ್ನು ಮರುಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಸಿಐಟಿಯು ಜಿಲ್ಲಾ ಘಟಕದ ಅಧ್ಯಕ್ಷ ಎಂ.ಬಿ. ಸಜ್ಜನ್, ಪ್ರಧಾನ ಕಾರ್ಯದರ್ಶಿ ಶಾಂತಾ ಘಂಟಿ, ಖಜಾಂಚಿ ಸ್ವಾಮಿ ನಾಗಯ್ಯ ಸ್ವಾಮಿ, ಉಪಾಧ್ಯಕ್ಷರಾದ ಗೌರಮ್ಮ ಪಾಟೀಲ, ಅಯ್ಯಪ್ಪ ಕರಗಾರ, ಶ್ರೀಮಂತ ಬಿರಾದಾರ, ರಾಜಶೇಖರ ಕೊತಂಬರಿ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪದವಿ ಶಿಕ್ಷಣದಲ್ಲಿ ಸ್ಪಷ್ಟ ಗುರಿ, ಶಿಸ್ತು ಬೆಳೆಸಿಕೊಳ್ಳಿ : ಶಾಸಕ ಅಲ್ಲಮಪ್ರಭು ಪಾಟೀಲ್



ಕಲಬುರಗಿ,ಅ.11-

ವಿದ್ಯಾರ್ಥಿಗಳು ಪದವಿ ಶಿಕ್ಷಣದ ಆರಂಭದಿಂದಲೇ ಸ್ಪಷ್ಟ ಗುರಿ, ಆತ್ಮವಿಶ್ವಾಸ ಹಾಗೂ ಶಿಸ್ತನ್ನು ಬೆಳೆಸಿಕೊಳ್ಳಬೇಕು. ಶಿಕ್ಷಣವೆಂದರೆ ಕೇವಲ ಪದವಿ ಪಡೆಯುವುದಲ್ಲ; ಜ್ಞಾನಾರ್ಜನೆ, ವ್ಯಕ್ತಿತ್ವ ವಿಕಸನ, ಉತ್ತಮ ಸಂಸ್ಕಾರ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ರೂಢಿಸಿಕೊಳ್ಳುವ ಪ್ರಕ್ರಿಯೆಯಾಗಿದೆ ಎಂದು ದಕ್ಷಿಣ ಕ್ಷೇತ್ರದ ಶಾಸಕ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಅಲ್ಲಮಪ್ರಭು ಪಾಟೀಲ ಹೇಳಿದರು.

ನಗರದ ಸರಕಾರಿ ಮಹಾವಿದ್ಯಾಲಯ (ಸ್ವಾಯತ್ತ)ದಲ್ಲಿ 2026 27ನೇ ಸಾಲಿನ ಬಿ.ಎ., ಬಿ.ಎಸ್ಸಿ . ಮತ್ತು ಬಿ.ಕಾಂ. ಪ್ರಥಮ ವರ್ಷದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಹೊಸ ದಿಗಂತ ಪದವಿ ಶಿಕ್ಷಣಕ್ಕೆ ಆತ್ಮವಿಶ್ವಾಸದ ಆರಂಭ ಎಂಬ ಫ್ರೆಶರ್ಸ್ ಓರಿಯಂಟೇಶನ್ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ಜೀವನ ಭವಿಷ್ಯ ರೂಪಿಸಿಕೊಳ್ಳುವ ಮಹತ್ವದ ಘಟ್ಟವಾಗಿದೆ. ಸಮಯದ ಮಹತ್ವ ಅರಿತು ಶಿಸ್ತುಬದ್ಧ ಅಧ್ಯಯನದ ಜತೆಗೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳು, ರಾಷ್ಟ್ರೀಯ ಸೇವಾ ಯೋಜನೆ ಸೇರಿದಂತೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇದರಿಂದ ನಾಯಕತ್ವದ ಗುಣ, ಸಂವಹನ ಕೌಶಲ, ಆತ್ಮವಿಶ್ವಾಸ ಹಾಗೂ ಸಾಮಾಜಿಕ ಕಳಕಳಿ ಬೆಳೆಯುತ್ತವೆ ಎಂದರು.

ಸ್ಪರ್ಧಾತ್ಮಕ ಜಗತ್ತಿನಲ್ಲಿ ಉತ್ತಮ ಅಂಕ ಗಳಿಸುವುದರ ಜತೆಗೆ ಉದ್ಯೋಗಕ್ಕೆ ಅಗತ್ಯವಾದ ಕೌಶಲಗಳನ್ನು ಬೆಳೆಸಿಕೊಳ್ಳುವುದು ಮುಖ್ಯ. ಶಿಕ್ಷಕರ ಮಾರ್ಗದರ್ಶನ ಪಡೆದು, ಗ್ರಂಥಾಲಯದ ಸದುಪ ಯೋಗ ಮಾಡಿಕೊಂಡು ನಿರಂತರ ಅಧ್ಯಯನದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೇಂದ್ರೀಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ. ಅಪ್ಪುಗೆರ ಸೋಮಶೇಖರ ಅವರು ಮಾತನಾಡಿ, ಪದವಿ ಶಿಕ್ಷಣವು ಹೊಸ ಅವಕಾಶಗಳು ಹಾಗೂ ಸವಾಲುಗಳಿಗೆ ತೆರೆದುಕೊಳ್ಳುವ ಹಂತವಾಗಿದೆ. ವಿದ್ಯಾರ್ಥಿಗಳು ಪಠ್ಯಪುಸ್ತಕಗಳ ಜ್ಞಾನಕ್ಕೆ ಸೀಮಿತವಾಗದೆ ಸಾಹಿತ್ಯ, ಸಂಸ್ಕೃತಿ, ಸಮಾಜ ಹಾಗೂ ಸಮಕಾಲೀನ ವಿದ್ಯಮಾನಗಳ ಕುರಿತು ಅರಿವು ಬೆಳೆಸಿಕೊಳ್ಳಬೇಕು. ಓದುವ ಹವ್ಯಾಸ, ಭಾಷಾ ಕೌಶಲ ಮತ್ತು ವಿಚಾರಶೀಲತೆ ವ್ಯಕ್ತಿತ್ವವನ್ನು ಸಮೃದ್ಧಗೊಳಿಸುತ್ತವೆ ಎಂದರು.

ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ. ಇಂದುಮತಿ ಪಿ. ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪ್ರಾಧ್ಯಾಪಕಿ ಡಾ. ಸವಿತಾ ತಿವಾರಿ, ಸ್ನಾತಕೋತ್ತರ ವಿಭಾಗದ ಡೀನ್ ಡಾ. ಮಲ್ಲೇಶಪ್ಪ ಕುಂಬಾರ, ಕಲಾ ವಿಭಾಗದ ಡೀನ್ ಡಾ. ವಿಜಯಕುಮಾರ ಸಾಲಿಮನಿ, ವಾಣಿಜ್ಯ ವಿಭಾಗದ ಡೀನ್ ಡಾ. ರಾಜಕುಮಾರ ಸಲಗರ, ವಿಜ್ಞಾನ ವಿಭಾಗದ ಡೀನ್ ಡಾ. ದವಲಪ್ಪ ಬಿ.ಎಚ್., ಸಿಬ್ಬಂದಿ ಕಾರ್ಯದರ್ಶಿ ಡಾ. ರವೀಂದ್ರಕುಮಾರ ಭಂಡಾರಿ, ಐಕ್ಯೂಎಸಿ ಸಂಯೋಜಕ ಮಹೇಶ ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.

ಮೊದಲ ಅಧಿವೇಶನದಲ್ಲಿ ವ್ಯಕ್ತಿತ್ವ ವಿಕಸನ ಮತ್ತು ಸಮಯ ನಿರ್ವಹಣೆ ಕುರಿತು ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯ ಕಲಬುರಗಿ ಘಟಕದ ಕಾರ್ಯದರ್ಶಿ ಸಿಎ ಶಂಭುಲಿಂಗಪ್ಪ ಜ.ಅವಂಟಿ ಉಪನ್ಯಾಸ ನೀಡಿದರು. ಡಾ. ಶ್ರೀನಿವಾಸ ರಾಮಾಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಡಾ. ರವಿ ಬೌದ್ದೆ ನಿರ್ವಹಿಸಿದರು.

ಎರಡನೇ ಅಧಿವೇಶನದಲ್ಲಿ ಮಹಾವಿದ್ಯಾಲಯದ ಪರಿಚಯ, ವಿವಿಧ ಕೋರ್ಸ್‌ಗಳು ಹಾಗೂ ಘಟಕಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ವಿಜ್ಞಾನ ವಿಭಾಗದ ಡೀನ್ ಡಾ. ದವಲಪ್ಪ ಬಿ.ಎಚ್. ಸಂಪನ್ಮೂಲ ವ್ಯಕ್ತಿಯಾಗಿದ್ದರು. ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ. ಮೊಹಮ್ಮದ್ ಆರಿಫ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ವಿಭಾಗದ ಪ್ರಾಧ್ಯಾಪಕಿ ಡಾ. ಶಾಮಲಾ ಸ್ವಾಮಿ ನಿರ್ವಹಿಸಿದರು.

ಸಮಾರೋಪ ಸಮಾರಂಭದಲ್ಲಿ ಪರೀಕ್ಷಾ ವಿಭಾಗದ ಉಪನಿಯಂತ್ರಕ ಅಮಿತಕುಮಾರ ಬುದಿಹಾಳ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಎನ್‌ಎಸ್‌ಎಸ್, ಎನ್‌ಸಿಸಿ, ರೆಡ್‌ಕ್ರಾಸ್, ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್, ದೈಹಿಕ ಶಿಕ್ಷಣ ಹಾಗೂ ವಿದ್ಯಾರ್ಥಿ ಕಲ್ಯಾಣ ವಿಭಾಗ ಸೇರಿದಂತೆ ವಿವಿಧ ಘಟಕಗಳು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದವು.

ಮಹೇಶ ಸ್ವಾಗತಿಸಿದರು. ಡಾ. ವಿಜಯಕುಮಾರ ಸಾಲಿಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀದೇವಿ ರಾಠೋಡ ಅತಿಥಿಗಳನ್ನು ಪರಿಚಯಿಸಿದರು. ಡಾ. ಪಂಚಾಕ್ಷರಿ ವಂದಿಸಿದರು. ಡಾ. ಬಲಭೀಮ ಸಾಂಗ್ಲಿ ನಿರೂಪಿಸಿದರು. ವಿವಿಧ ವಿಭಾಗಗಳ ಮುಖ್ಯಸ್ಥರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಶಹಾಬಾದ್ : ಎಸ್‌ಐಆರ್ ರದ್ದು, ಜ್ಞಾನೇಶ್ ಕುಮಾರ್ ವಜಾಕ್ಕೆ ಆಗ್ರಹಿಸಿ ಪ್ರತಿಭಟನೆ



ಶಹಾಬಾದ್,ಅ.11-

ದಿಲ್ಲಿಯಲ್ಲಿ ನಡೆಯುತ್ತಿರುವ ಎಸ್‌ಐಆರ್ ವಿರೋಧಿ ಹೋರಾಟಕ್ಕೆ ಜನಪರ ಸಂಘಟನೆಗಳ ಒಕ್ಕೂಟ ಸಂಪೂರ್ಣ ಬೆಂಬಲ ನೀಡುತ್ತದೆ. ಮತದಾರರ ಹಕ್ಕುಗಳ ರಕ್ಷಣೆಗಾಗಿ ಎಸ್‌ಐಆರ್ ಪ್ರಕ್ರಿಯೆಯನ್ನು ತಕ್ಷಣ ರದ್ದುಗೊಳಿಸಬೇಕು ಎಂದು ದಲಿತ ಸಂಘರ್ಷ ಸಮಿತಿ (ದಸಂಸ) ರಾಜ್ಯ ಸಂಘಟನಾ ಸಂಚಾಲಕ ಮರಿಯಪ್ಪ ಹಳ್ಳಿ ಆಗ್ರಹಿಸಿದರು.

ನಗರದ ರೈಲ್ವೆ ನಿಲ್ದಾಣದ ಸಮೀಪ ಶನಿವಾರ ಸಂಜೆ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆ ಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಪ್ರತಿ ಚುನಾವಣೆಯ ಸಂದರ್ಭದಲ್ಲೂ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ತಿದ್ದುಪಡಿ ಹಾಗೂ ಪರಿಶೀಲನೆ ನಡೆಯುವುದು ಸಾಮಾನ್ಯ. ಆದರೆ ಈ ಬಾರಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯ ಹಿಂದಿನ ಉದ್ದೇಶದ ಬಗ್ಗೆ ಅನುಮಾನಗಳು ಮೂಡಿವೆ. ಬಿಜೆಪಿ ಸರಕಾರದ ಆಡಳಿತದಲ್ಲಿ ಪ್ರಶ್ನಿಸುವ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕುಗಳಿಗೆ ಧಕ್ಕೆಯಾಗುತ್ತಿದೆ. ಕೋಟ್ಯಂತರ ಜನರನ್ನು ಮತದಾನದ ಹಕ್ಕಿನಿಂದ ವಂಚಿಸುವ ಆತಂಕ ಎದುರಾಗಿದೆ ಎಂದು ಆರೋಪಿಸಿದರು.

ಮತದಾನದ ಹಕ್ಕು ಪ್ರಜಾಪ್ರಭುತ್ವದ ಮೂಲಭೂತ ಆಶಯವಾಗಿದ್ದು, ಅದನ್ನು ರಕ್ಷಿಸಲು ಜನಸಾಮಾನ್ಯರು ಒಗ್ಗಟ್ಟಿನಿಂದ ಹೋರಾಡಬೇಕು. ಎಸ್‌ಐಆರ್ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕು, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ತಕ್ಷಣ ವಜಾಗೊಳಿಸಬೇಕು ಹಾಗೂ ದಿಲ್ಲಿಯ ಪ್ರತಿಭಟನೆಯಲ್ಲಿ ಬಂಧಿತರಾಗಿರುವ ಹೋರಾಟಗಾರರನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಗಣಪತರಾವ್ ಕೆ., ರಾಘವೇಂದ್ರ ಎಂ.ಜಿ., ಮಾನೆ, ನಾಗಪ್ಪ ರೈಚೂರಕರ್ ಹಾಗೂ ಗುಂಡಮ್ಮ ಮಡಿವಾಳ ಮಾತನಾಡಿದರು.

ಈ ಸಂದರ್ಭದಲ್ಲಿ ಕಾಡಾ ಅಧ್ಯಕ್ಷ ಡಾ. ಎಂ.ಎಂ. ರಶೀದ್, ಗಣಪತರಾವ್ ಕೆ., ರಾಘವೇಂದ್ರ ಎಂ.ಜಿ., ಮಾನೆ, ನಾಗಪ್ಪ ರೈಚೂರಕರ್ ಗುಂಡಮ್ಮ ಮಲ್ಲಿಕಾರ್ಜುನಗೌಡ ನರಸಿಂಲು ಹಾಗೂ ಮಹಮ್ಮದ್ ಮಸ್ತಾನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಲಬುರಗಿಯನ್ನು ದ್ವಿತೀಯ ಆಡಳಿತ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಸಚಿವ ಡಾ. ಶರಣಪ್ರಕಾಶ್ ಪಾಟೀಲ್‌ಗೆ ಮನವಿ



ಕಲಬುರಗಿ,ಅ.11-

ಕಲ್ಯಾಣ ಕರ್ನಾಟಕದ ವಿಭಾಗೀಯ ಕೇಂದ್ರವಾಗಿರುವ ಕಲಬುರಗಿಯನ್ನು ಪ್ರಾದೇಶಿಕ ಉಪರಾಜಧಾನಿ ಅಥವಾ ದ್ವಿತೀಯ ಆಡಳಿತ ಕೇಂದ್ರವಾಗಿ ಅಭಿವೃದ್ಧಿಪಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಮಾಜಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ದೀಪಕನಾಗ ಪುಣ್ಯಶೆಟ್ಟಿ ನೇತೃತ್ವದ ನಿಯೋಗವು ವೈದ್ಯಕೀಯ ಶಿಕ್ಷಣ ಸಚಿವ ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣಪ್ರಕಾಶ ಪಾಟೀಲ ಅವರಿಗೆ ಮನವಿ ಸಲ್ಲಿಸಿತು. ಭಾರತ ಸರಕಾರದ ನೀತಿ ಆಯೋಗದ ಉಪಾಧ್ಯಕ್ಷ ಡಾ. ಅಶೋಕ್ ಕುಮಾರ್ ಲಾಹಿರಿ ಅವರ ಶಿಫಾರಸಿನಂತೆ, ಎರಡನೇ ಬೆಂಗಳೂರು ಪರಿಕಲ್ಪನೆಯಡಿ ಕಲಬುರಗಿಯನ್ನು ದ್ವಿತೀಯ ಆಡಳಿತ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಕಲ್ಯಾಣ ಕರ್ನಾಟಕದ ಆಡಳಿತಾತ್ಮಕ ಚಟುವಟಿಕೆಗಳಿಗೆ ಮತ್ತಷ್ಟು ವೇಗ ನೀಡಲು ಕಲಬುರಗಿಯಲ್ಲಿ ಕಲ್ಯಾಣ ಕರ್ನಾಟಕ ಪ್ರಜಾಸೌಧ ನಿರ್ಮಿಸಬೇಕು. ಅಲ್ಲದೆ, ಪ್ರತಿ ವರ್ಷ ವಿಧಾನಮಂಡಲದ ಮಳೆಗಾಲದ ಅಧಿವೇಶನವನ್ನು ಕಲಬುರಗಿಯಲ್ಲಿ ನಡೆಸುವ ಮೂಲಕ ಈ ಭಾಗದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಒತ್ತಾಯ ಮಾಡಿದರು. ಕಲ್ಯಾಣ ಕರ್ನಾಟಕದ ಅಭಿವೃದ್ಧಿ, ಶಿಕ್ಷಣ, ಉದ್ಯೋಗ, ನೀರಾವರಿ, ಆರೋಗ್ಯ ಮತ್ತು ಸಾಮಾಜಿಕ ನ್ಯಾಯ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ಮಹತ್ವದ ಕೊಡುಗೆ ನೀಡಿದ ಗಣ್ಯರ ಹೆಸರನ್ನು ಪ್ರಮುಖ ಸರಕಾರಿ ಸಂಸ್ಥೆಗಳು ಹಾಗೂ ಕಟ್ಟಡಗಳಿಗೆ ನಾಮಕರಣ ಮಾಡಬೇಕು ಎಂದು ನಿಯೋಗ ಆಗ್ರಹ ಮಾಡಿದೆ.

ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಎನ್. ಧರ್ಮಸಿಂಗ್ ಮತ್ತು ವೀರೇಂದ್ರ ಪಾಟೀಲ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮಾಜಿ ರಾಷ್ಟ್ರೀಯ ಅಧ್ಯಕ್ಷರು ಮತ್ತು ಮಾಜಿ ಸಚಿವರಾಗಿದ್ದ ದಿವಂಗತ ಭೀಮಣ್ಣ ಖಂಡ್ರೆ ಅವರ ಹೆಸರನ್ನು ಪ್ರಮುಖ ಸರ್ಕಾರಿ ಸಂಸ್ಥೆ ಮತ್ತು ಕಟ್ಟಡಗಳಿಗೆ ನಾಮಕರಣ ಮಾಡುವ ಪ್ರಸ್ತಾವನೆಯನ್ನು ಮುಂಬರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಸೂಕ್ತ ಸರಕಾರಿ ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿದರು.

ಒಂದನೇಯ ಪುಟದಿಂದ

ಸಾಂಸ್ಕೃತಿಕ ನಗರಿಯನ್ನು ಬ್ರ್ಯಾಂಡ್ ಮೈಸೂರು ಮಾಡುತ್ತೇವೆ : ದಸರಾ ಉದ್ಘಾಟನೆ ವೇಳೆ ಸಿಎಂ ಡಿಕೆಶಿ ಘೋಷಣೆ

ಆಶೀರ್ವಾದ ಮಾಡಲು ಬಂದಿದ್ದಾರೆ. ಅವರಿಗೆಲ್ಲರಿಗೂ ಭಕ್ತ ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದು ಅವರು ಹೇಳಿದರು.

ಗಣೇಶ ವಿಸರ್ಜನೆ ದುರಂತ: ಮೃತ ಮಕ್ಕಳ ಕುಟುಂಬಗಳಿಗೆ ಪರಿಹಾರ, ಉದ್ಯೋಗಕ್ಕೆ ಆಗ್ರಹ

ನಗರದ ವಾರ್ಡ್ ಸಂಖ್ಯೆ 13ರ ಜಹೀರಾಬಾದ್ ಬಡಾವಣೆಯಲ್ಲಿ ಸೆಪ್ಟೆಂಬರ್ 18ರಂದು ಮಧ್ಯರಾತ್ರಿ ಸುಮಾರು 12.40ಕ್ಕೆ ಗಣೇಶ ಮೂರ್ತಿಯ ವಿಸರ್ಜನಾ ಮೆರವಣಿಗೆ ನಡೆಯುತ್ತಿದ್ದ ಸಂದರ್ಭದಲ್ಲಿ ಟ್ರ್ಯಾಕ್ಟರ್‌ನಿಂದ ಮೂವರು ಮಕ್ಕಳು ಆಯತಪ್ಪಿ ಕೆಳಗೆ ಬಿದ್ದಿದ್ದರು. ಟ್ರ್ಯಾಕ್ಟರ್‌ನ ಚಕ್ರ ಹರಿದ ಪರಿಣಾಮ 12 ವರ್ಷದ ಸುಚಿತ್ ಕುಮಾರ್ ಸ್ಥಳದಲ್ಲೇ ಮೃತಪಟ್ಟಿದ್ದರು. 13 ವರ್ಷದ ಚರಣ ಕುಮಾರ್ ಕೂಡ ಮೃತಪಟ್ಟಿದ್ದು, ವಿಜಯಕುಮಾರ್ ಗಾಯಗೊಂಡು ರಾಯಚೂರಿನ ರಿಮ್ಸ್ ಬೋಧನಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಈ ಸಂಬಂಧ ಸದರ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಸಮಿತಿ ತಿಳಿಸಿದೆ.

ಮೃತ ಮಕ್ಕಳು ಸೇರಿದಂತೆ ಸಂತ್ರಸ್ತ ಕುಟುಂಬಗಳು ಪರಿಶಿಷ್ಟ ಜಾತಿಯ ಮಾದಿಗ ಸಮುದಾಯಕ್ಕೆ ಸೇರಿದ ಬಡ, ಭೂರಹಿತ ದಿನಗೂಲಿ ಕಾರ್ಮಿಕ ಕುಟುಂಬಗಳಾಗಿವೆ. ಮಕ್ಕಳನ್ನು ಕಳೆದುಕೊಂಡ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಗಾಯಗೊಂಡ ಬಾಲಕನ ಚಿಕಿತ್ಸಾ ವೆಚ್ಚ ಭರಿಸಲು ಸಾಧ್ಯವಾಗದ ಸ್ಥಿತಿಯಲ್ಲಿವೆ ಎಂದು ಸಮಿತಿ ಮನವಿಯಲ್ಲಿ ವಿವರಿಸಿದೆ.

ಗಾಯಗೊಂಡ ಬಾಲಕನಿಗೆ ಸಂಪೂರ್ಣ ಉಚಿತ ಚಿಕಿತ್ಸೆ ಹಾಗೂ ಔಷಧ ವೆಚ್ಚವನ್ನು ಸರ್ಕಾರವೇ ಭರಿಸಬೇಕು. ಅಗತ್ಯವಿದ್ದಲ್ಲಿ ಸುಸಜ್ಜಿತ ಖಾಸಗಿ ಆಸ್ಪತ್ರೆಗೆ ವರ್ಗಾಯಿಸಿ ಉನ್ನತ ಚಿಕಿತ್ಸೆ ಕೊಡಿಸಬೇಕು. ಮೃತ ಮಕ್ಕಳ ಕುಟುಂಬಗಳಿಗೆ ಸೂಕ್ತ ಆರ್ಥಿಕ ಪರಿಹಾರ ನೀಡುವುದರ ಜತೆಗೆ, ಸಂತ್ರಸ್ತ ಮೂರು ಕುಟುಂಬಗಳ ಸದಸ್ಯರಿಗೆ ಮಹಾನಗರ ಪಾಲಿಕೆಯಲ್ಲಿ ಉದ್ಯೋಗಾವಕಾಶ ಕಲ್ಪಿಸಬೇಕು ಎಂದು ಸಮಿತಿ ಆಗ್ರಹಿಸಿದೆ.

ಈ ಬೇಡಿಕೆಗಳನ್ನು ಈಡೇರಿಸುವಂತೆ ದಮನಿತ ಸೇನಾ ಸಮಿತಿಯ ರಾಯಚೂರು ಜಿಲ್ಲಾ ಘಟಕವು ಜಿಲ್ಲಾ ಉಸ್ತುವಾರಿ ಸಚಿವ ಆಪ್ತ ಸಹಾಯಕರಿಗೆ ಮನವಿ ಸಲ್ಲಿಸಿ ಎಂ.ಭರತ್ ಕುಮಾರ್ ಒತ್ತಾಯಿಸಿದ್ದಾರೆ.

ದೊರೆಯ ಹಬ್ಬವಾಗಿದ್ದ ದಸರಾ ಇಂದು ಧರೆಯ ಹಬ್ಬವಾಗಿದೆ: ಅಭಿನವ ಗವಿಸಿದ್ದೇಶ್ವರ ಶ್ರೀ

ಶಿಕ್ಷಣದ ಅಭಿವೃದ್ಧಿಗೆ ಹರೇಕಳ ಹಾಜಬ್ಬರ ಸಾಧನೆ ಪ್ರೇರಣೆಯಾಗಲಿ

ಹಣ್ಣು ಮಾರಾಟ ಮಾಡುತ್ತಲೇ ಶಾಲೆ ನಿರ್ಮಿಸಿ ಮಕ್ಕಳ ಶಿಕ್ಷಣಕ್ಕೆ ನೆರವಾದ ಪದ್ಮಶ್ರೀ ಹರೇಕಳ ಹಾಜಬ್ಬರ ಸಾಧನೆಯನ್ನು ಸ್ಮರಿಸಿದ ಅಭಿನವ ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿ, ಅವರಿಂದ ಪ್ರೇರಣೆ ಪಡೆದು ಪ್ರತಿಯೊಬ್ಬರೂ ತಮ್ಮ ಊರಿನ ಶಾಲೆಗಳ ಅಭಿವೃದ್ಧಿಗೆ ಕೊಡುಗೆ ನೀಡಬೇಕು. ಶಿಕ್ಷಣದ ಬೆಳವಣಿಗೆಯೇ ಸಮಾಜದ ಪ್ರಗತಿಗೆ ಭದ್ರ ಬುನಾದಿಯಾಗಿದೆ ಎಂದರು.

ಎಲ್‌ನಿನೋ ಸಂಕಷ್ಟದ ನಡುವೆ ಭತ್ತದ ಗದ್ದೆಗೆ ಇಲಿಗಳ ಕಾಟ: ಇಳುವರಿ ಕುಸಿತದಿಂದ 100 ಕೋಟಿ ನಷ್ಟ ಸಾಧ್ಯತೆ!



ಉಂಡಿ (ಆಂಧ್ರ ಪ್ರದೇಶ),ಅ.11-

ಎಲ್ ನಿನೋ ಪರಿಣಾಮದಿಂದ ಉಂಟಾಗಿರುವ ಹವಾಮಾನ ವೈಪರೀತ್ಯದ ನಡುವೆ ಕೃಷಿ ಮಾಡಿದ ರೈತರು ಇದೀಗ ಇಲಿಗಳಿಂದಾಗಿ ಸಂಕಷ್ಟಕ್ಕೆ ಒಳಗಾಗುವ ಪರಿಸ್ಥಿತಿ ಎದುರಾಗಿದೆ. ಆಂಧ್ರ ಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ರೈತರಿಗೆ ಇಲಿಗಳು ದೊಡ್ಡ ಸಮಸ್ಯೆಗಳನ್ನು ಉಂಟು ಮಾಡುತ್ತಿವೆ. ಭತ್ತದ ಗದ್ದೆಗಳಲ್ಲಿ ಇವುಗಳ ಹಾವಳಿಯಿಂದಾಗಿ ಪ್ರತಿ ಎಕರೆಗೆ 2ರಿಂದ 4 ಚೀಲಗಳಷ್ಟು ಇಳುವರಿ ನಷ್ಟವಾಗುವ ಸಾಧ್ಯತೆ ತಲೆದೂರಿದೆ.

ಇವುಗಳ ಸಮಸ್ಯೆ ಅರಿತು ವೇಗವಾಗಿ ಬೆಳೆಯುತ್ತಿರುವ ಇಲಿ ಸಂತತಿಯನ್ನು ತಗ್ಗಿಸಲು ಆಗಸ್ಟ್ ಅಂತ್ಯದಲ್ಲಿ ಇಲಿಗಳ ನಿರ್ಮೂಲನಾ ಅಭಿಯಾನವನ್ನು ಕೈಗೊಳ್ಳಲಾಗಿತ್ತು. ಆದರೆ, ಅದರಿಂದ ಸಂಪೂರ್ಣ ಪರಿಣಾಮಕಾರಿ ಫಲಿತಾಂಶ ಸಿಗದ ಕಾರಣ ಇಲಿಗಳ ಸಂಖ್ಯೆ ಹೆಚ್ಚಾಗಿದ್ದು, ಅವು ಬೆಳೆಗಳ ಮೇಲೆ ದಾಳಿ ನಡೆಸುತ್ತಿವೆ. ಒಂದು ಇಲಿಯನ್ನು ಹಿಡಿಯಲು ಆಗುತ್ತಿರುವ ಖರ್ಚು ಕೂಡ ಕಡಿಮೆಯಲ್ಲ. ಇದು ಈಗ ರೈತರಿಗೆ ವೆಚ್ಚದ ಬಿಸಿ ಮುಟ್ಟಿಸಿದೆ.

ಅವಿಭಜಿತ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ 4.25 ಲಕ್ಷ ಎಕರೆ ಪ್ರದೇಶದಲ್ಲಿ ಭತ್ತವನ್ನು ಬೆಳೆಯಲಾಗಿದೆ. ಇದರಲ್ಲಿ ಎಂಟಿಯು 1318 ತಳಿಯು ಹೆಚ್ಚಿನ ಸಂಖ್ಯೆಯಲ್ಲಿದೆ. ನಂತರದ ಸ್ಥಾನಗಳಲ್ಲಿ ಎಂಟಿಯು 7029 (ಸ್ವರ್ಣ), ಸಂಪದ ಸ್ವರ್ಣ ಎಂಟಿಯು 1293, ಎಂಟಿಯು 1121 (ಶ್ರೀಧೃತಿ) ಬೆಳೆಯಲಾಗುತ್ತದೆ. ಅನೇಕ ಪ್ರದೇಶಗಳಲ್ಲಿ ಬೆಳೆಗಳು ಪ್ರಸ್ತುತ ತೆನೆ ಕಟ್ಟುವ, ಹೂಬಿಡುವ ಮತ್ತು ಕಾಳು ತುಂಬುವ ಹಂತದಲ್ಲಿವೆ.

ಮುಂಚಿತವಾಗಿ ಕೃಷಿ ಚಟುವಟಿಕೆಗಳನ್ನು ಆರಂಭಿಸಿದ ಗದ್ದೆಗಳಲ್ಲಿ ಈ ತಿಂಗಳ ಅಂತ್ಯದ ವೇಳೆಗೆ ಕೊಯ್ಲು ಕಾರ್ಯ ಆರಂಭವಾಗುವ ನಿರೀಕ್ಷೆಯಿದೆ. ಆದರೆ, ಇಳುವರಿ ಸಮಸ್ಯೆ ತಲೆದೂರಿದೆ. ಭತ್ತದ ಬೆಳೆಯನ್ನು ಹೆಗ್ಗಣಗಳು ಮತ್ತು ಹೊಲದ ಇಲಿಗಳು ನಾಶಪಡಿಸುತ್ತಿವೆ ಎಂದು ಕೃಷಿ ತಜ್ಞರು ತಿಳಿಸಿದ್ದಾರೆ.

ಹಂಗಾಮಿನ ಆರಂಭದಿಂದಲೂ ತಾವು 9 -10 ಬಾರಿ ನಿಯಂತ್ರಣ ಕ್ರಮಗಳನ್ನು ಕೈಗೊಂಡಿದ್ದು, ಈಗಾಗಲೇ ಪ್ರತಿ ಎಕರೆಗೆ 3,500ಕ್ಕೂ ಹೆಚ್ಚು ಹಣವನ್ನು ಖರ್ಚು ಮಾಡಿದ್ದರೂ ಇವುಗಳ ನಿಯಂತ್ರಣ ಸಾಧ್ಯವಾಗಿಲ್ಲ. ಇದರಿಂದಾಗಿ ಒಟ್ಟಾರೆ ಇಲಿಗಳಿಂದ ಅಂದಾಜು ಮೌಲ್ಯ 100 ಕೋಟಿಗೂ ಹೆಚ್ಚು ನಷ್ಟ ಉಂಟಾಗಿದೆ ಎಂದಿದ್ದಾರೆ.

ರೈತರಾದ ಪೊಲುಬೋತು ರಾಮು ಈ ಸಮಸ್ಯೆ ಕುರಿತು ಮಾತನಾಡಿದ್ದು, ಗುತ್ತಿಗೆ ಆಧಾರದ ಮೇಲೆ 12 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದೇನೆ. ಈ ಹಂಗಾಮಿನಲ್ಲಿ ನಾನು ಹತ್ತು ಬಾರಿ ಇಲಿಗಳನ್ನು ಹಿಡಿಯುವ ಕೆಲಸ ಮಾಡಿದ್ದೇನೆ. ಆಗಸ್ಟ್ ತಿಂಗಳಲ್ಲಿ ಬ್ರೊಮಾಡಿಯೋಲೋನ್ ಸಿಂಪಡಿಸಿದ ಬಳಿಕ ಅವುಗಳ ಸಂಖ್ಯೆ ಹೆಚ್ಚಾಗಿದೆ. ಬೆಳೆ ಕಟಾವಿನ ಸಮಯದ ವೇಳೆಗೆ ಅವು ಎಷ್ಟು ಹಾನಿ ಉಂಟುಮಾಡುತ್ತವೆಯೋ ನನಗೆ ತಿಳಿದಿಲ್ಲ ಎಂದರು.

ಉಂಡಿ ಕೃಷಿ ವಿಜ್ಞಾನ ಕೇಂದ್ರದ ಪ್ರಧಾನ ವಿಜ್ಞಾನಿ ಎನ್.ಶ್ರೀನಿವಾಸ ರಾವ್ ಮಾತನಾಡಿ, ಬ್ರೊಮಾಡಿಯೊಲೋನ್ ಸಿಂಪಡನೆ ಜೊತೆಗೆ ತಡೆಗೋಡೆ ಬಲೆಗಳು ಮತ್ತು ಪಂಜರದ ಬಲೆಗಳಂತಹ ವಿಧಾನಗಳನ್ನು ಬಳಸಿಕೊಂಡು ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕು. ಉಪದ್ರವ ತೀವ್ರವಾಗಿರುವ ಪ್ರದೇಶಗಳಲ್ಲಿ ಅಗತ್ಯವಿದ್ದಲ್ಲಿ ಝಿಂಕ್ ಫಾಸ್ಫೈಡ್ ತಯಾರಿಸಿ ಬಳಸಬಹುದು. ಈ ರಾಸಾಯನಿಕವನ್ನು ಹಂಗಾಮಿನಲ್ಲಿ ಒಮ್ಮೆ ಮಾತ್ರ ಬಳಸಬೇಕು ಎಂದು ಇಲಿ ಹಾವಳಿಗೆ ಪರಿಹಾರ ಸೂಚಿಸಿದರು.

ಬೀದರ್ ಮಾಂಜ್ರಾ ನದಿಗೆ ನೀರು ಹರಿಸಲು ಶಾಸಕ ಪ್ರಭು ಚವ್ಹಾಣ್ ಸೂಚನೆ

ಔರಾದ್,ಅ.11-

ಮಾಂಜ್ರಾ ನದಿ ಬತ್ತಿ ಹೋಗಿರುವುದರಿಂದ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಕಾರಂಜಾ ಜಲಾಶಯದಿಂದ ಮಾಂಜ್ರಾ ನದಿಗೆ ಅಗತ್ಯ ಪ್ರಮಾಣದ ನೀರು ಹರಿಸುವಂತೆ ಶಾಸಕ ಪ್ರಭು ಚವ್ಹಾಣ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿ ಮಾತನಾಡಿದ ಅವರು, ಮುಂಗಾರು ಹಂಗಾಮಿನಲ್ಲಿ ಮಳೆ ಕೊರತೆಯಾದ ಹಿನ್ನೆಲೆಯಲ್ಲಿ ಮಾಂಜ್ರಾ ನದಿ ಬತ್ತಿ ಹೋಗಿದೆ. ಹಾಲಹಳ್ಳಿಯಿಂದ ಔರಾದ್ ಪಟ್ಟಣಕ್ಕೆ ಅಗುವ ನೀರು ಸರಬರಾಜಿನಲ್ಲಿಯೂ ವ್ಯತ್ಯಯ ಉಂಟಾಗಿದ್ದು, ಎಲ್ಲ ವಾರ್ಡ್‌ಗಳಿಂದ ನಿರಂತರ ದೂರುಗಳು ಬರುತ್ತಿವೆ. ಜೊತೆಗೆ ನದಿ ವ್ಯಾಪ್ತಿಯ ಬಹಳಷ್ಟು ಗ್ರಾಮಗಳಲ್ಲಿ ನೀರಿನ ಕೊರತೆ ಎದುರಾಗಿದ್ದು, ಜನ-ಜಾನುವಾರುಗಳಿಗೆ ತೀವ್ರ ಸಮಸ್ಯೆಯಾಗುತ್ತಿದೆ. ಹಾಗಾಗಿ ತುರ್ತಾಗಿ ನದಿಗೆ ನೀರು ಹರಿಸಿ ಸಾರ್ವಜನಿಕರು ಮತ್ತು ಜಾನುವಾರುಗಳಿಗೆ ಅನುಕೂಲ ಮಾಡಿಕೊಡುವಂತೆ ಅವರು ನಿರ್ದೇಶನ ನೀಡಿದ್ದಾರೆ.

ಮಳೆ ಕೊರತೆಯಿಂದಾಗಿ ಈ ಬಾರಿ ಬೇಸಿಗೆ ಕಾಲದ ಮುನ್ನವೇ ಬರ ಪರಿಸ್ಥಿತಿ ಉಂಟಾಗಿದ್ದು, ಸಾಕಷ್ಟು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಹಾಗೂ ಎಲ್ಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿರಬೇಕು. ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆ ಕುರಿತು ದೂರು ನೀಡಿದಾಗ ನಿರ್ಲಕ್ಷ್ಯ ಮಾಡದೆ ತಕ್ಷಣ ಸ್ಪಂದಿಸಿ ಪರಿಹಾರ ಕಲ್ಪಿಸಬೇಕು. ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಪಿಡಿಓಗಳ ಕಾರ್ಯವೈಖರಿಯನ್ನು ಪರಿಶೀಲಿಸುವುದರ ಜೊತೆಗೆ ಗ್ರಾಮಗಳಲ್ಲಿ ನೀರು ಪೂರೈಕೆಯ ಸ್ಥಿತಿಗತಿಗಳ ಬಗ್ಗೆ ನಿರಂತರ ನಿಗಾ ವಹಿಸಬೇಕು ಎಂದು ಅವರು ಸೂಚಿಸಿದ್ದಾರೆ.

ಜೆಜೆಎಂ ಯೋಜನೆ ನಿರೀಕ್ಷೆಗೆ ತಕ್ಕಂತೆ ಆಗದ ಹಿನ್ನೆಲೆಯಲ್ಲಿ ಎಲ್ಲ ಗ್ರಾಮಗಳಿಗೂ ಸಮರ್ಪಕವಾಗಿ ಕುಡಿಯುವ ನೀರು ಪೂರೈಕೆಯಾಗದಿರುವುದು ಕಂಡು ಬಂದಿದೆ. ಅಧಿಕಾರಿಗಳು ಸಮಸ್ಯೆ ಇರುವ ಗ್ರಾಮಗಳಿಗೆ ಖುದ್ದಾಗಿ ಭೇಟಿ ನೀಡಿ, ನೀರು ಪೂರೈಕೆಯಲ್ಲಿನ ಅಡಚಣೆಗಳನ್ನು ಪರಿಶೀಲಿಸಿ, ತಕ್ಷಣ ಪರಿಹಾರ ಕಲ್ಪಿಸಬೇಕು. ಬರ ಪರಿಸ್ಥಿತಿಯಿಂದ ಈಗಾಗಲೇ ರೈತರು ಹಾಗೂ ಗ್ರಾಮೀಣ ಜನರು ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತಷ್ಟು ತೊಂದರೆ ಉಂಟು ಮಾಡಬಾರದು. ಜನರಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸುವುದು ಅಧಿಕಾರಿಗಳ ಮೊದಲ ಆದ್ಯತೆಯಾಗಬೇಕು. ಕುಡಿಯುವ ನೀರಿನ ವಿಷಯದಲ್ಲಿ ಜನರಿಗೆ ತೊಂದರೆಯಾದರೆ ಕ್ರಮ ಕೈಗೊಳ್ಳುವುದಾಗಿ ಅವರು ಎಚ್ಚರಿಸಿದ್ದಾರೆ.

ಮಧ್ಯಪ್ರದೇಶಕ್ಕೆ ಯುವ ಸಂಗಮ ನಿಯೋಗ: ಸಿಯುಕೆ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣರಿಂದ ಚಾಲನೆ



ಕಲಬುರಗಿ,ಅ.11-

ಕೇಂದ್ರ ಶಿಕ್ಷಣ ಸಚಿವಾಲಯದ ಏಕ್ ಭಾರತ್ ಶ್ರೇಷ್ಠ ಭಾರತ್ ಕಾರ್ಯಕ್ರಮದಡಿ ಆಯೋಜಿಸಿರುವ ಯುವ ಸಂಗಮ 7ನೇ ಹಂತದ ಭಾಗವಾಗಿ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ನೇತೃತ್ವದಲ್ಲಿ ರಾಜ್ಯದ 43 ಸದಸ್ಯರ ನಿಯೋಗವು ಅಕ್ಟೋಬರ್ 10ರಿಂದ 17ರವರೆಗೆ ಮಧ್ಯಪ್ರದೇಶಕ್ಕೆ ಭೇಟಿ ನೀಡಲಿದೆ. ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರು ಶನಿವಾರ ನಿಯೋಗದ ಪ್ರವಾಸಕ್ಕೆ ಚಾಲನೆ ನೀಡಿದರು.

ರಾಜ್ಯದ ವಿವಿಧ ಜಿಲ್ಲೆಗಳ 40 ವಿದ್ಯಾರ್ಥಿಗಳು ಹಾಗೂ ಮೂವರು ಬೋಧಕ ಸಿಬ್ಬಂದಿಯನ್ನು ಒಳಗೊಂಡಿರುವ ಈ ನಿಯೋಗಕ್ಕೆ ಭೋಪಾಲ್‌ನ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ಆತಿಥ್ಯ ವಹಿಸಲಿದೆ. ಕರ್ನಾಟಕ ಮತ್ತು ಮಧ್ಯಪ್ರದೇಶದ ನಡುವಿನ ಸಾಂಸ್ಕೃತಿಕ ವಿನಿಮಯವನ್ನು ಉತ್ತೇಜಿಸುವುದು, ಯುವಜನರಲ್ಲಿ ಪರಸ್ಪರ ತಿಳಿವಳಿಕೆ ಬೆಳೆಸುವುದು ಹಾಗೂ ರಾಷ್ಟ್ರೀಯ ಏಕತೆಯನ್ನು ಬಲಪಡಿಸುವುದು ಈ ಭೇಟಿಯ ಮುಖ್ಯ ಉದ್ದೇಶವಾಗಿದೆ.

ಪ್ರವಾಸದ ಅಂಗವಾಗಿ ನಿಯೋಗವು ಭೋಪಾಲ್‌ನ ಅಪ್ಪರ್ ಲೇಕ್, ಮಧ್ಯಪ್ರದೇಶ ವಿಧಾನಸಭೆ, ಭಾರತ್ ಭವನ, ಬುಡಕಟ್ಟು ವಸ್ತುಸಂಗ್ರಹಾಲಯ, ಇಂದಿರಾ ಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯ ಹಾಗೂ ಬಿಎಚ್‌ಇಎಲ್ ಸಂಸ್ಥೆಗೆ ಭೇಟಿ ನೀಡಲಿದೆ. ಯುನೆಸ್ಕೋ ವಿಶ್ವ ಪರಂಪರೆಯ ತಾಣವಾದ ಸಾಂಚಿ ಸ್ತೂಪ, ಭೋಜೇಶ್ವರ ದೇವಾಲಯ ಮತ್ತು ಭೀಮ್‌ಬೆಟ್ಕಾ ಶಿಲಾ ಆಶ್ರಯ ತಾಣಗಳನ್ನೂ ವೀಕ್ಷಿಸಲಿದೆ.

ಇಂದೋರ್‌ನ ರಾಜವಾಡ ಅರಮನೆ ಸೇರಿದಂತೆ ಪ್ರಮುಖ ಐತಿಹಾಸಿಕ ಸ್ಥಳಗಳ ಭೇಟಿಯೂ ಪ್ರವಾಸದ ಭಾಗವಾಗಿದೆ. ಪದ್ಮ ಪ್ರಶಸ್ತಿ ಪುರಸ್ಕೃತೆ ದುರ್ಗಾ ಬಾಯಿ ವ್ಯಾಮ್ ಅವರ ನೇತೃತ್ವದಲ್ಲಿ ನಡೆಯಲಿರುವ ಗೊಂಡ್ ಕಲಾ ಕಾರ್ಯಾಗಾರವು ನಿಯೋಗದ ವಿಶೇಷ ಆಕರ್ಷಣೆಯಾಗಿರಲಿದೆ.

ಅಕ್ಟೋಬರ್ 16ರಂದು ಭೋಪಾಲ್‌ನ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನಲ್ಲಿ ಸಮಾರೋಪ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಅಕ್ಟೋಬರ್ 17ರಂದು ನಿಯೋಗವು ಕರ್ನಾಟಕಕ್ಕೆ ಮರಳಲಿದೆ.

ಸಿಯುಕೆಯ ಯುವ ಸಂಗಮ 7ನೇ ಹಂತದ ನೋಡಲ್ ಅಧಿಕಾರಿ ಡಾ. ಎಂ. ಶಿವ ಹಾಗೂ ಕಾರ್ಯಕ್ರಮ ಸಂಯೋಜಕರಾದ ಡಾ. ಕೃಷ್ಣ ಶೇಖರ್ ಶರ್ಮಾ ಮತ್ತು ಡಾ. ಸಂಜನಾ ಕೌಶಿಕ್ ಅವರು ನಿಯೋಗದೊಂದಿಗೆ ತೆರಳಿದ್ದಾರೆ.

ಇತ್ತೀಚೆಗೆ, ಯುವ ಸಂಗಮದ ಪರಸ್ಪರ ವಿನಿಮಯ ಕಾರ್ಯಕ್ರಮದಡಿ ಸೆಪ್ಟೆಂಬರ್ 28ರಿಂದ ಅಕ್ಟೋಬರ್ 3ರವರೆಗೆ ಮಧ್ಯಪ್ರದೇಶದ 51 ಸದಸ್ಯರ ನಿಯೋಗಕ್ಕೆ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಆತಿಥ್ಯ ವಹಿಸಿತ್ತು. ಈ ಸಂದರ್ಭದಲ್ಲಿ ನಿಯೋಗವು ಬೆಂಗಳೂರು, ಬೀದರ್ ಹಾಗೂ ಕಲಬುರಗಿಗೆ ಭೇಟಿ ನೀಡಿ ರಾಜ್ಯದ ಸಾಂಸ್ಕೃತಿಕ ಪರಂಪರೆ, ಶಿಕ್ಷಣ ಸಂಸ್ಥೆಗಳು, ವೈಜ್ಞಾನಿಕ ಪ್ರಗತಿ ಮತ್ತು ಅಭಿವೃದ್ಧಿ ಉಪಕ್ರಮಗಳನ್ನು ಪರಿಚಯಿಸಿಕೊಂಡಿತ್ತು.

ಕಲಬುರಗಿ ವಾಡಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಅವ್ಯವಸ್ಥೆ: ಡಿಎಚ್‌ಒಗೆ ಬಿಜೆಪಿ ಮನವಿ



ವಾಡಿ,ಅ.11-

ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ಸಾರ್ವಜನಿಕರಿಗೆ ಸೂಕ್ತ ಚಿಕಿತ್ಸೆ ಸಿಗುತ್ತಿಲ್ಲ ಎಂದು ಬಿಜೆಪಿ ಸ್ಥಳೀಯ ಅಧ್ಯಕ್ಷ ವೀರಣ್ಣ ಯಾರಿ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಪ್ರತಿದಿನ ಚಿಕಿತ್ಸೆಗೆ ಆಗಮಿಸುವ ಬಡ ಹಾಗೂ ಗ್ರಾಮೀಣ ಭಾಗದ ರೋಗಿಗಳೊಂದಿಗೆ ವೈದ್ಯಕೀಯ ಮತ್ತು ಆಡಳಿತ ಮಂಡಳಿಯ ಸಿಬ್ಬಂದಿ ಬೇಜವಾಬ್ದಾರಿತನದಿಂದ ವರ್ತಿಸುತ್ತಿದ್ದಾರೆ. ಸರಿಯಾದ ಸಮಯಕ್ಕೆ ಚಿಕಿತ್ಸೆ ನೀಡದೆ ರೋಗಿಗಳನ್ನು ನಿರ್ಲಕ್ಷಿಸುತ್ತಿದ್ದಾರೆ ಎಂದು ಆರೋಪಿಸಿದರು.

ಆಸ್ಪತ್ರೆಯಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ವೈದ್ಯಕೀಯ ಉಪಕರಣಗಳು ಸೂಕ್ತ ನಿರ್ವಹಣೆ ಇಲ್ಲದೆ ಹಾಗೂ ಸಣ್ಣಪುಟ್ಟ ತಾಂತ್ರಿಕ ದೋಷಗಳಿಂದಾಗಿ ಕೊಳೆಯುತ್ತಿವೆ. ಇದರಿಂದ ಅಪಘಾತ ಮತ್ತು ಗಂಭೀರ ಸ್ಥಿತಿಯಲ್ಲಿರುವ ರೋಗಿಗಳಿಗೆ ತುರ್ತು ಚಿಕಿತ್ಸೆ ಸಿಗದೆ ಅನಿವಾರ್ಯವಾಗಿ ಖಾಸಗಿ ಆಸ್ಪತ್ರೆಗಳಿಗೆ ಹೋಗುವಂತಾಗಿದೆ ಎಂದರು.

ಜಿಲ್ಲಾ ಆರೋಗ್ಯಾಧಿಕಾರಿಗಳು ತಕ್ಷಣವೇ ವಾಡಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ತನಿಖೆ ನಡೆಸಬೇಕು. ಕರ್ತವ್ಯಲೋಪದ ಹಿನ್ನೆಲೆ ವೈದ್ಯರನ್ನು, ಸಿಬ್ಬಂದಿಯನ್ನು ವಜಾಗಿಳಿಸಬೇಕು ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಒಂದು ವಾರದೊಳಗೆ ಸರಿಪಡಿಸದಿದ್ದರೆ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಭಾಗಣ್ಣ ದೊರೆ, ಸ್ಥಳೀಯ ಮುಖಂಡರಾದ ಪ್ರಕಾಶ ಪೂಜಾರಿ, ರಾಜು ಶಾಲಿ, ಮಲ್ಲಿಕಾರ್ಜುನ ಸಾತಖೇಡ ಉಪಸ್ಥಿತರಿದ್ದರು.

ದಾವಣಗೆರೆ: ಆಸ್ಪತ್ರೆ, ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಅಧಿಕಾರಿಗಳ ದಿಢೀರ್ ಭೇಟಿ

ದಾವಣಗೆರೆ,ಅ.11-

ಭ್ರೂಣ ಪತ್ತೆಯು ಕಾನೂನುಬಾಹಿರ ಹಿನ್ನೆಲೆಯಲ್ಲಿ ಅಧಿಕಾರಿಗಳು ಆಸ್ಪತ್ರೆ ಹಾಗೂ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಗುರುವಾರ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಉಪವಿಭಾಗಾಧಿಕಾರಿ ಸಂತೋಷ್ ಕುಮಾರ್ ಡಿಹೆಚ್‌ಒ ಮಧು ನೇತೃತ್ವದಲ್ಲಿ ದಾವಣಗೆರೆಯ ಹಲವು ಖಾಸಗಿ ಆಸ್ಪತ್ರೆಗಳಿಗೆ ಪಿಸಿಪಿಎನ್‌ಡಿಟಿ ತಂಡ ಭೇಟಿ ನೀಡಿ, ಪರಿಶೀಲನೆ ನಡೆಸಿತು.

ನಗರದ ಹೆಗಡೆ ಡಯೋಗ್ನಸ್ಟಿಕ್ ಸೆಂಟ್ರ, ಶಿವಪ್ರಕಾಶ ಹಾಸ್ಪಿಟಲ್, ಸೌಖ್ಯದಾ ಆಸ್ಪತ್ರೆ ಸೇರಿದಂತೆ ಹಲವು ಆಸ್ಪತ್ರೆಗಳಿಗೆ ಭೇಟಿ ನೀಡಿದ ಅಧಿಕಾರಿಗಳು ಖುದ್ದಾಗಿ ಪರಿಶೀಲನೆ ನಡೆಸಿ ಮಾಹಿತಿ ಕಲೆ ಹಾಕಿದರು.

ಇದರ ಸಂಬಂಧ ಗುರುವಾರ ಉಪವಿಭಾಗಾಧಿಕಾರಿ ಕಚೇರಿಯಲ್ಲಿ ಪಿಸಿ ಆ್ಯಂಡ್ ಪಿಎನ್‌ಡಿಟಿ ಸಮಿತಿ ಪರಿಶೀಲನಾ ಸಭೆ ನಡೆಸಲಾಗಿತ್ತು. ಸರ್ಕಾರಿ, ಖಾಸಗಿ ಆಸ್ಪತ್ರೆಗಳು ಮತ್ತು ಸ್ಕ್ಯಾನಿಂಗ್ ಕೇಂದ್ರಗಳಿಗೆ ಅನಿರೀಕ್ಷಿತ ಭೇಟಿ ನೀಡುವುದು ಸೇರಿದಂತೆ ಭ್ರೂಣ ಹತ್ಯೆ ಮತ್ತು ಗರ್ಭಪಾತ ತಡೆಯಲು ಅಗತ್ಯವಿರುವ ಎಲ್ಲಾ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಉಪವಿಭಾಗಾಧಿಕಾರಿ ಹಾಗೂ ಜಿಲ್ಲಾ ಪಿಸಿ ಆ್ಯಂಡ್ ಪಿಎನ್‌ಡಿಟಿ ಸಮಿತಿ ಅಧ್ಯಕ್ಷ ಸಂತೋಷ್ ಕುಮಾರ್ ಅಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಿದ್ದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಮಹಿಳಾ ಸಮಿತಿಗೆ ಬೀದರ್‌ನ ರಂಜಿತಾ ಜೈನೂರ್ ಜಗದೇವಿ ಭಂಡಾರಿ ಆಯ್ಕೆ



ಬೀದರ್,ಅ.11-

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯ ಮಹಿಳಾ ಸಮಿತಿಗೆ ಬೀದರ್ ಜಿಲ್ಲೆಯ ರಂಜಿತಾ ಜೈನೂರ್ ಹಾಗೂ ಜಗದೇವಿ ಭಂಡಾರಿ ಆಯ್ಕೆಯಾಗಿದ್ದಾರೆ.

ಅ.8ರಂದು ಚಿಕ್ಕಮಗಳೂರಿನಲ್ಲಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಅವರ ನೇತೃತ್ವದಲ್ಲಿ ನಡೆದ ರಾಜ್ಯಮಟ್ಟದ ಮಹಿಳಾ ಒಕ್ಕೂಟದ ಸರ್ವ ಸದಸ್ಯರ ಸಭೆಯಲ್ಲಿ ಮಹಿಳಾ ಸಮಿತಿಯ ಪುನರ್ ರಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ಬೀದರ್ ಜಿಲ್ಲೆಯಿಂದ ಇಬ್ಬರನ್ನು ರಾಜ್ಯ ಸಮಿತಿಗೆ ಆಯ್ಕೆ ಮಾಡಲಾಗಿದೆ.

ಸಭೆಯಲ್ಲಿ ರಾಜ್ಯ ಸಮಿತಿಯ ಮುಖಂಡ ಮಾವಳ್ಳಿ ಶಂಕರ್ ಇಂದಿರಾ ಕೃಷ್ಣಪ್ಪ, ರಮೇಶ್ ಡಾಕುಳಗಿ, ನಿರ್ಮಲಾ, ರಾಮಣ್ಣ ಕಲ್ದೇವನಹಳ್ಳಿ, ನಾಗಣ್ಣ ಬಡಿಗೇರ್ ಅರ್ಜುನ್ ಗೊಬ್ಬೂರು ಸೇರಿದಂತೆ ವಿವಿಧ ರಾಜ್ಯ ಪದಾಧಿಕಾರಿಗಳು ಭಾಗವಹಿಸಿದ್ದರು.

ಬೀದರ್ ಜಿಲ್ಲೆಯಿಂದ ನೂತನವಾಗಿ ಆಯ್ಕೆಯಾದ ಇಬ್ಬರು ಮಹಿಳೆಯರು ಸಂಘಟನೆಯ ಆಶಯಗಳಿಗೆ ಅನುಗುಣವಾಗಿ ಮಹಿಳೆಯರ ಹಕ್ಕುಗಳು, ಸಾಮಾಜಿಕ ನ್ಯಾಯ ಮತ್ತು ಸಮಾನತೆಗಾಗಿ ಕಾರ್ಯನಿರ್ವಹಿಸುವ ವಿಶ್ವಾಸವಿದೆ ಎಂದು ಜಿಲ್ಲಾ ಸಂಚಾಲಕ ರಮೇಶ್ ಮಂದಕನಳ್ಳಿ ತಿಳಿಸಿದ್ದಾರೆ.

ಪಿಎಂಕೆಎಸ್‌ವೈ 2.0 ಯೋಜನೆಯಲ್ಲಿ ಅವ್ಯವಹಾರ ಆರೋಪ: ತನಿಖೆಗೆ ಸುಭಾಷ್ ಆರ್.ಗುತ್ತೇದಾರ ಆಗ್ರಹ



ಕಲಬುರಗಿ,ಅ.11-

ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಪಿಎಂಕೆಎಸ್‌ವೈ 2.0) ಅಡಿಯಲ್ಲಿ ಆಳಂದ ತಾಲೂಕಿಗೆ ಮಂಜೂರಾದ 10 ಕೋಟಿ ಅನುದಾನದಲ್ಲಿ ಅವ್ಯವಹಾರ ನಡೆದಿದ್ದು, ಕಾಮಗಾರಿ ನಡೆಸದೆ ಸುಳ್ಳು ಬಿಲ್‌ಗಳನ್ನು ಸೃಷ್ಟಿಸಿ ಹಣ ದುರ್ಬಳಕೆ ಮಾಡಲಾಗಿದೆ ಎಂದು ಆರೋಪಿಸಿರುವ ಮಾಜಿ ಶಾಸಕ ಸುಭಾಷ್ ಆರ್. ಗುತ್ತೇದಾರ, ಪ್ರಕರಣವನ್ನು ಕೇಂದ್ರ ತನಿಖಾ ತಂಡದಿಂದ ತನಿಖೆಗೊಳಪಡಿಸಬೇಕು ಎಂದು ಆಗ್ರಹಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 202425, 202526 ಮತ್ತು 202627ನೇ ಸಾಲಿನಲ್ಲಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಯಡಿ ಕಳಪೆ ಕಾಮಗಾರಿಗಳು ನಡೆದಿವೆ. ಸರ್ಕಾರದ ನಿಯಮಗಳನ್ನು ಪಾಲಿಸದ ಕಾರಣ ರೈತರಿಗೆ ಯೋಜನೆಯ ಪ್ರಯೋಜನ ದೊರೆತಿಲ್ಲ. ಆದರೆ, ಸರಕಾರದ ಹಣ ಮಾತ್ರ ಖರ್ಚಾಗಿದೆ ಎಂದು ಆರೋಪಿಸಿದರು.

202526ನೇ ಸಾಲಿನಲ್ಲಿ ತಡೋಳಾ, ಖಂಡಾಳ, ಜಮಗಾ (ಕೆ), ಖಜೂರಿ ಹಾಗೂ ಮಟಕಿ ಜಲಾನಯನ ಪ್ರದೇಶಗಳಲ್ಲಿ ಕಳಪೆ ಗುಣಮಟ್ಟದ ಚೆಕ್‌ಡ್ಯಾಂಗಳನ್ನು ನಿರ್ಮಿಸಿ ಸುಮಾರು 5 ಕೋಟಿ ದುರ್ಬಳಕೆ ಮಾಡಲಾಗಿದೆ ಎಂದು ದೂರಿದರು. ಮಟಕಿ ಗ್ರಾಮದಲ್ಲಿ ಚೆಕ್‌ಡ್ಯಾಂ ನಿರ್ಮಾಣದ ವೇಳೆ ಸಿಮೆಂಟ್, ಮರಳು ಹಾಗೂ ಇತರ ಸಾಮಗ್ರಿಗಳನ್ನು ಸಮರ್ಪಕ ಪ್ರಮಾಣದಲ್ಲಿ ಬಳಸಿಲ್ಲ. ಅಲ್ಲದೆ, ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿರುವ ಜಮೀನಿನಲ್ಲಿಯೂ ಕಾಮಗಾರಿ ನಡೆಸಲಾಗಿದೆ ಎಂದು ಆರೋಪಿಸಿದರು.

202627ನೇ ಸಾಲಿನಲ್ಲಿ ಆಳಂದ ತಾಲೂಕಿಗೆ ಮಂಜೂರಾದ 150 ಸ್ಪ್ರಿಂಕ್ಲರ್ ಸೆಟ್‌ಗಳಿಗೆ ಒಂದೇ ದಿನ ಕಾರ್ಯಾದೇಶ ಪಡೆದು ಮಾರಾಟ ಮಾಡಲಾಗಿದೆ. ಅವುಗಳನ್ನು ಸ್ಥಳೀಯ ರೈತರಿಗೆ ವಿತರಿಸಿಲ್ಲ ಎಂದು ಗುತ್ತೇದಾರ ಆರೋಪಿಸಿದರು.

ಇದೇ ಅವಧಿಯಲ್ಲಿ ಆಳಂದ ತಾಲೂಕಿನ ಬೀಜಗಳನ್ನು ಮಹಾರಾಷ್ಟ್ರಕ್ಕೆ ಸಾಗಿಸುತ್ತಿದ್ದ ವಾಹನವನ್ನು ಮಾದನಹಿಪ್ಪರಗಾ ಪೊಲೀಸರು ಜಪ್ತಿ ಮಾಡಿದ್ದರು ಎಂದರು.

ಯೋಜನೆಯ ಒಟ್ಟು 10 ಕೋಟಿ ಅನುದಾನದಲ್ಲಿ ನಿಯಮಾನುಸಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರ ಜಮೀನುಗಳಲ್ಲಿ 2.50 ಕೋಟಿ ಮೊತ್ತದ ಕಾಮಗಾರಿಗಳನ್ನು ಕೈಗೊಳ್ಳಬೇಕಿತ್ತು. ಆದರೆ, ಅಂತಹ ರೈತರ ಜಮೀನುಗಳಲ್ಲಿ ಕಾಮಗಾರಿಗಳನ್ನು ನಡೆಸಿಲ್ಲ. ಇದು ನಿಯಮಗಳ ಉಲ್ಲಂಘನೆಯಾಗಿದೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ವೀರಣ್ಣ ಮಂಗಾಣೆ, ಚಂದ್ರಕಾಂತ ಭೂಸನೂರ, ಮಲ್ಲಿಕಾರ್ಜುನ ಕಂದಗೂಳೆ, ಮಹಾದೇವಪ್ಪ ಪಾಟೀಲ, ಬಸವರಾಜ ನೆಲ್ಲೂರ, ನಾಗರಾಜ ಶೇಗಜಿ, ಆನಂದರಾವ ಪಾಟೀಲ, ರವಿ ಮದನಕರ, ರಮೇಶ ಬಿರಾದಾರ, ಸಂತೋಷ ಹಾದಿಮನಿ, ಲಿಂಗರಾಜ ಪಾಟೀಲ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನಕಲಿ ಜಾಹೀರಾತು ನೋಡಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ: ₹21.93 ಲಕ್ಷ ಕಳೆದುಕೊಂಡ ಬೆಳಗಾವಿ ನಿವಾಸಿ

ಬೆಳಗಾವಿ,ಅ.11-

ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಅಧಿಕ ಲಾಭ ಗಳಿಸಬಹುದು ಎಂದು ಯೂಟ್ಯೂಬ್‌ನಲ್ಲಿ ನಕಲಿ ಜಾಹೀರಾತು ನಂಬಿದ ಬೆಳಗಾವಿ ನಿವಾಸಿಯೊಬ್ಬರು ಬರೋಬ್ಬರಿ 21.93 ಲಕ್ಷ ರೂ. ಕಳೆದುಕೊಂಡಿರುವ ಘಟನೆ ಬೆಳಕಿಗೆ ಬಂದಿದೆ. ಇಲ್ಲಿನ ಹಿಂದವಾಡಿ ನಿವಾಸಿ ಕಿಶೋರ (60) ಹಣ ಕಳೆದುಕೊಂಡವರು. ಈ ಸಂಬಂಧ ಸಿಇಎನ್ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಜೂನ್ 20ರಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಹೆಸರಿನಲ್ಲಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಕುರಿತ ನಕಲಿ ಜಾಹೀರಾತನ್ನು ಯೂಟ್ಯೂಬ್‌ನಲ್ಲಿ ಕಿಶೋರ ನೋಡಿದ್ದರು.

ಆ ಬಳಿಕ ಜಾಹೀರಾತಿನಲ್ಲಿದ್ದ ಲಿಂಕ್ ಮೂಲಕ ಹೆಸರು, ವಿಳಾಸ ದಾಖಲಿಸಿ ಕಿಶೋರ ನೋಂದಣಿ ಮಾಡಿಕೊಂಡಿದ್ದರು. ಮುಂದೆ ಸಂದೀಪ ಶರ್ಮಾ ಎಂಬಾತ ಕರೆ ಮಾಡಿ ಅವರನ್ನು ಟೆಲಿಗ್ರಾಮ್ ಗುಂಪಿಗೆ ಸೇರಿಸಿದ್ದ, ನಂತರ ಪ್ರಿಯಾಂಶ ಶರ್ಮಾ ಎಂಬ ವ್ಯಕ್ತಿ ಫೋನ್‌ಪೇ ಮೂಲಕ ಮೊದಲಿಗೆ 22 ಸಾವಿರ ರೂ. ಹಣವನ್ನು ವರ್ಗಾಯಿಸಿಕೊಂಡಿದ್ದ. ಹೆಚ್ಚಿನ ಮೊತ್ತ ಹೂಡಿಕೆ ಮಾಡಿದರೆ ಅಧಿಕ ಲಾಭ ಸಿಗಲಿದೆ ಎಂದು ನಂಬಿಸಿ, ವೆಬ್‌ಸೈಟ್ ಮೂಲಕ ಹಂತ ಹಂತವಾಗಿ ಒಟ್ಟು 21,93,999 ರೂ. ಹಣ ವರ್ಗಾವಣೆ ಮಾಡಿಸಿಕೊಳ್ಳಲಾಗಿದೆ.

ಮೈಸೂರು ದಸರಾ- ನವರಾತ್ರಿ, ವಿಜಯದಶಮಿ ಮತ್ತು ಧಾರ್ಮಿಕ ಆಚರಣೆಗಳು



ನನ್ನ ಹಿಂದಿನ ಲೇಖನದಲ್ಲಿ ಮೈಸೂರು ದಸರಾದ ಇತಿಹಾಸ, ಮೈಸೂರು ಒಡೆಯರ ಕಾಲದ ದಸರಾ ಆಚರಣೆಗಳ ಬಗ್ಗೆ ತಿಳಿದುಕೊಂಡಿದ್ದೀರಿ. ಇಂದಿನ ನನ್ನ ಲೇಖನದಲ್ಲಿ ಮೈಸೂರು ದಸರಾ ಸಂರ್ಭದಲ್ಲಿ ಆಚರಿಸಲ್ಪಡುವ ನವರಾತ್ರಿ ಉತ್ಸ ವ, ವಿಜಯದಶಮಿ ಹಬ್ಬ ಮತ್ತು ಧರ್ಮಿಕ ಆಚರಣೆಗಳ ಬಗ್ಗೆ ತಿಳಿದುಕೊಳ್ಳೋಣ.

ಪರಿಚಯ:

ಮಹಿಷಾಸುರ ರ್ದಿನಿ: ಚಾಮುಂಡೇಶ್ವರಿ ದೇವಿ

ಚಾಮುಂಡೇಶ್ವರಿಮೈಸೂರಿನಅಧಿದೇವತೆ, ಸಪ್ತಮಾತೃಕೆಯರಲ್ಲಿ ಏಳನೆಯವಳು. ಹಿಂದೂರ್ಮ್ಮದಲ್ಲಿ, ಚಾಮುಂಡೇಶ್ವರಿಪ್ರಬಲವಾದದೇವತೆ. ಚಾಮುಂಡಿ ಎಂದೊಡನೆಈಕೆಶಿಷ್ಟಪುರಾಣದವಿಶಿಷ್ಟಶಕ್ತಿದೇವತೆ. ಆದಿಶಕ್ತಿಯಾಗಿಹುಟ್ಟಿದುಷ್ಟಶಿಕ್ಷಕಿ-ಶಿಷ್ಟರಕ್ಷಕಿಯಾಗಿಮಹಿಷನನ್ನುಕೊಂದು, ಲೋಕಕಂಟಕರಾಗಿದ್ದಚಂಡ-ಮುಂಡರೆಂಬರಕ್ಕಸರನ್ನುಸಂಹರಿಸಿ 'ಚಾಮುಂಡಿ'ಯಾಗಿದ್ದಾಳೆಂಬುದುತಿಳಿಯುತ್ತದೆ.

ಮೈಸೂರಿನದೊಡ್ಡದೇವರಾಜಒಡೆಯರ್ಅವರುಬೆಟ್ಟವನ್ನೇರಲುಬರುವ ಭಕ್ತಾದಿ ಗಳಿಗೆಅನುಕೂಲವಾಗಲೆಂದು1101ಮೆಟ್ಟಲುಗಳನ್ನುಕಟ್ಟಿಸಿ, 700ನೇಮೆಟ್ಟಿಲಬಳಿಬೃಹತ್ನಂದಿವಿಗ್ರಹವನ್ನುಸ್ಥಾಪಿಸಿದ್ದಾರೆ. ಆಶ್ವಯುಜಶುಕ್ಲಪಕ್ಷದನವ ರಾತ್ರಿಯಸಮಯದಲ್ಲಿ ಭಾರತಾದಾದ್ಯಂತ ಚಾಮುಂಡಿಆರಾಧನೆ ದರ್ಗೆಯಹೆಸರಿನಲ್ಲಿಬಹಳ ವೈಭವಯುತವಾಗಿ ನಡೆಯುತ್ತದೆ.

ನವರಾತ್ರಿದಿನಗಳಲ್ಲಿಚಾಮುಂಡಿಬೆಟ್ಟದಲ್ಲಿರುವದೇಗುಲದಲ್ಲಿಅಷ್ಟಲಕ್ಷ್ಮೀಯರ, ಅಷ್ಟದರ್ಗೆಯರಆರಾಧನೆಯನ್ನುಮಾಡಲಾಗುತ್ತದೆ. ನವದಿನವುದೇವಿಗೆ ವಿಶಿಷ್ಟವಾದಅಲಂಕಾರಗಳನ್ನು, ಉಡುಗೆ-ತೊಡುಗೆ, ಆಭರಣಗಳಿಂದ ಚಾಮುಂಡೇಶ್ವರಿಯನ್ನುಸಿಂಗರಿಸಿ ಭಕ್ತವೃಂದಕ್ಕೆಸಂತಸವನ್ನುನೀಡುತ್ತಾರೆ.

ಮೈಸೂರುಒಡೆಯರಕುಲದೇವಿ-ನಾಡದೇವಿಬೆಟ್ಟದಮೇಲಿರುವಮೂಲ ಚಾಮುಂಡಿ. ಪ್ರತಿಶುಕ್ರವಾರದಂದು ಚಿನ್ನದಕವಚದಲ್ಲಿ ಶೋಭಿಸುವಬೆಟ್ಟದ ಚಾಮುಂಡಿಯಕಲಾತ್ಮಕಚಿತ್ರ

ನವರಾತ್ರಿಯಂದುಮಾತೃದೇವತೆಯಆರಾಧನೆಯಹಿನ್ನೆಲೆ

ಇಡೀಪ್ರಪಂಚದಸೃಷ್ಟಿ-ಸ್ಥಿತಿ-ಲಯಗಳಿಗೆಒಂದುಶಕ್ತಿಯೇಕಾರಣ; ಅದುಸ್ತ್ರೀದೇವತೆಎಂದುಪ್ರಕೃತಿಯನ್ನುಮಾತೃ ರೂಪದಲ್ಲಿನೋಡುವ ಪರಂಪರೆಯಿಂದಆರಂಭವಾಗಿದೆ. ಇದುಶಾಕ್ತಪರಂಪರೆಯ ಮೂಲದಲ್ಲಿದ್ದುಶಕ್ತಿದೇವತೆಯನ್ನುಮಹಾಕಾಲೀ ಮಹಾಲಕ್ಷ್ಮೀ - ಮಹಾಸರಸ್ವತಿಯಾಗಿನೋಡಲಾಗಿದೆ. ಇದೇಮುಂದುವರಿದು ಶರನ್ನವರಾತ್ರಿಯಲ್ಲಿ ದೇವಿಆರಾಧನೆಯುಜನಪ್ರಿಯಗೊಂಡಿದೆ.

ನವರಾತ್ರಿಪೂಜೆಮತ್ತುದಸರಾಆಚರಣೆ

'ದರ್ಗಾ' ಎಂದರೆ, ಭಕ್ತರದರ್ಗತಿಯನ್ನುನಾಶಮಾಡುವವಳುಎಂರ್ಥ. ಈದರ್ಗಾ ದೇವಿಯಸ್ತುತಿಗಳುವೇದದಲ್ಲಿಯೇಕಂಡುಬರುತ್ತವೆ. ಇವಳನ್ನು ದರ್ಗಾಲಕ್ಷ್ಮೀ, ವಿಷ್ಣುದರ್ಗಾಎಂದೂಕರೆಯಲಾಗಿದೆ. ಪುರಾಣಗಳಲ್ಲಿಮಹಿಷಾಸುರರ್ದಿನಿಯಕಥೆಗಳುಹೆಚ್ಚುವಿವರಣಾತ್ಮಕವಾಗಿರ್ಣಿಸಲ್ಪಟ್ಟಿವೆ. ರಂಭಾಸುರನಮಗನಾದಮಹಿಷಾಸುರನುಒಂದುಹೆಣ್ಣಿನಿಂದಮಾತ್ರಸಾವುಬರಲಿ' ಎಂಬವರಬಲದಿಂದಕೊಬ್ಬಿದೇವಮತ್ತುಮನುಷ್ಯರಿಗೆತೊಂದರೆನೀಡುತ್ತಾ ಅವರೆಲ್ಲರನ್ನೂಲೋಕಭ್ರಷ್ಟರನ್ನಾಗಿಮಾಡಿದ. ಇದರಿಂದನೊಂದದೇವತೆಗಳು ತ್ರಿಮರ್ತಿಗಳಲ್ಲಿತಮ್ಮನ್ನುಕಾಪಾಡುವಂತೆಮೊರೆಯಿಟ್ಟರು. ಆಗತ್ರಿಮರ್ತಿಗಳ ಸ್ವರೂಪವಾಗಿಆದಿಶಕ್ತಿಯುಆವರ್ಭವಿಸಿದಳು. ಅವಳಿಗೆತ್ರಿಮರ್ತಿಗಳು ಮತ್ತುಎಲ್ಲಾದೇವತೆಗಳುತಮ್ಮತಮ್ಮಶಕ್ತಿಗಳನ್ನುನೀಡಿದರು. ಈಸಮಯದಲ್ಲಿ ಆದಿಶಕ್ತಿಯನೇತೃತ್ವದದೇವಗಣದಮೇಲೆಮಹಿಷಾಸುರನಅಧಿಪತ್ಯದಲ್ಲಿ, ಚಂಡ-ಮುಂಡರು, ಶುಂಭ-ನಿಶುಂಭರು, ರಕ್ತಬೀಜಾಸುರಮುಂತಾದ ಆಸುರೀಶಕ್ತಿಗಳುಯುದ್ಧಮಾಡಿದರು. ಯುದ್ಧದಲ್ಲಿಪರ್ವತೀಶಕ್ತಿಯುಚಂಡ-ಮುಂಡರನ್ನುವಧೆಮಾಡಿಚಾಮುಂಡೇಶ್ವರಿಯಾದಳು. ಶುಂಭ-ನಿಶುಂಭರನ್ನು ಸರಸ್ವತಿಯುಸಂಹಾರಮಾಡಿಮಹಾಸರಸ್ವತಿಯಾದಳು. ಮಹಾಲಕ್ಷ್ಮಿಯು ಮಹಿಷಾಸುರನನ್ನುರ್ದಿಸಿ 'ಮಹಿಷಾಸುರರ್ದಿನಿ'ಯಾಗಿ, ಅನಂತರಮೂರುಶಕ್ತಿಗಳುಒಟ್ಟಾಗಿಒಬ್ಬಳೇಚಂಡಿ - ಜಗಜ್ಜನ ನೀಎಂಬುದನ್ನುಜಗತ್ತಿಗೆ ತೋರಿಸಿಕೊಟ್ಟರು. ಅಂದಿನಿಂದಆದೇವಿಯಹೆಸರಲ್ಲಿ, 'ಮಹಿಷ' ಎಂಬ ಅಜ್ಞಾನ ಮತ್ತುಅಹಂಕಾರಗಳಿಂದನಮ್ಮನ್ನುದೂರೀಕರಿಸಿ ಸನ್ಮರ್ಗನೀಡುವಂತೆ ಪೂಜೆಗಳನ್ನು ಆಚರಿಸಲಾಗುತ್ತಿದ್ದುಅದೇನವ ರಾತ್ರಿಉತ್ಸ ವವಾಗಿಮರ್ಪಟ್ಟಿದೆ.

ನವರಾತ್ರಿಯನ್ನು ಒಂಬತ್ತುದಿನಗಳಕಾಲ ಶರದೃತುವಿನಲ್ಲಿ ಆಚರಿಸುವುದರಿಂದ ಇದನ್ನು'ಶರನ್ನವರಾತ್ರಿ'ಎಂದುಕರೆಯಲಾಗುತ್ತಿದ್ದು, ಈಸಮಯದಲ್ಲಿದೇವೀ ಆರಾಧನೆಗೆಮಹತ್ವವನ್ನುನೀಡಲಾಗಿದೆ. ಇದುನಿಜರ್ಥದಲ್ಲಿಶಕ್ತಿ ರೂಪದಲ್ಲಿರುವಪ್ರಕೃತಿಮಾತೆಯಆರಾಧನೆಯಾಗಿದೆ. ಆದ್ದರಿಂದಲೇ





ಈನವರಾತ್ರಿಗಳಲ್ಲಿಯೂಶಕ್ತಿಸ್ವರೂಪಿಣಿಯರಾದದರ್ಗಾ, ಮಹಾಲಕ್ಷ್ಮೀ, ಮಹಾಕಾಳಿ, ಮಹಾಸರಸ್ವತಿಯರವಿವಿಧ ರೂಪಗಳನ್ನುಪ್ರಮುಖವಾಗಿ ಆರಾಧಿಸಲಾಗುತ್ತದೆ. ಅಂದರೆ, ಸ್ತ್ರೀದೇವತೆಗಳನ್ನುಮಾತೃ ಸ್ವರೂಪದಲ್ಲಿ ಪೂಜಿಸಲಾಗುತ್ತದೆ.

ನವರಾತ್ರಿಮತ್ತುವಿಜಯದಶಮಿಯನ್ನುಸೇರಿಸಿಹತ್ತುದಿನಗಳಉತ್ಸ ವವನ್ನಾಗಿ ಆಚರಿಸುವುದುಪ್ರಮುಖವಾಗಿ ರೂಢಿಯಲ್ಲಿದೆ. ಮೊದಲನೆಯದಿನ ಘಟಸ್ಥಾಪನೆಮಾಡಿದೇವಿಯಶಕ್ತಿಗಳವಿವಿಧಮಂತ್ರಜಪ, ಪುರಾಣಗಳಪಠಣ, ಪೂಜೆ, ಕುಮಾರಿಪೂಜೆ, ಸರಸ್ವತೀಪೂಜೆ, ಸುಹಾಸಿನಿಪೂಜೆ, ವ್ರತ, ತಪಾನುಷ್ಠಾನ, ಉಪವಾಸಇತ್ಯಾದಿಗಳನ್ನುಆಚರಿಸಲಾಗುತ್ತದೆ. ಹತ್ತನೆಯದಿನದ ವಿಜಯದಶಮಿ ಆಚರಣೆಯನ್ನು' ಅಪರಾಜಿತಾದೇವಿ'ಯ ಪೂಜೆಯನ್ನಾಗಿ, ಅಂದರೆ, ವಿಜಯಲಕ್ಷ್ಮಿದೇವಿಯಪೂಜೆಯಾಗಿ ಆಚರಿಸುವ ಸಂಪ್ರದಾಯವನ್ನುಕಾಣುತ್ತೇವೆ.

ನವರಾತ್ರಿಯಲ್ಲಿದೇವಿಪೂಜೆಏಕೆವಿಶೇಷ?

ನವರಾತ್ರಿಯಸಂರ್ಭದಲ್ಲಿಸರಸ್ವತೀಪೂಜೆ, ಕಾಲರಾತ್ರಿಪೂಜೆ, ದರ್ಗಾಷ್ಟಮಿಪೂಜೆ, ಆಯುಧಪೂಜೆ, ಸೀಮೋಲ್ಲಂಘನಮುಂತಾದ ವಿಧಿ-ವಿಧಾನಗಳುಇವೆ. ಇದಕ್ಕೂಪೌರಾಣಿಕಹಿನ್ನೆಲೆಯಿದೆ. ಮೂಲಾನಕ್ಷತ್ರದಲ್ಲಿ ಸರಸ್ವತಿದೇವಿಯುಆವರ್ಭಾವವಾದ್ದರಿಂದಅಂದುಸರಸ್ವತೀಪೂಜೆ. ದೇವಿಯುಕಾಲರಾತ್ರಿಯಾಗಿ ಅಂದುಮಹಿಷಾಸುರಸಂಹಾರಮಾಡಿದ್ದರಿಂದ ಕಾಳ ರಾತ್ರಿಪೂಜೆಯದಿನದಂದುಮಹಿಷಾಸುರಸಂಹಾರಮಾಡಿ ಅಂದುದೇವಿಗೆಬಲಿನೀಡಲಾಗುತ್ತದೆ. ದರ್ಗಾಷ್ಟಮಿಯ ದಿನದರ್ಗೆಅಸುರರನ್ನು ಸಂಹಾರಮಾಡಿದದಿನವಾದ್ದರಿಂದ 'ದರ್ಗಾಪೂಜೆ', 'ಚಂಡಿಹೋಮ'ಗಳು ಮತ್ತುಪಾಂಡವರುಗೋಗ್ರಹಣಕಾಲದಲ್ಲಿ ತಮ್ಮಆಯುಧಗಳನ್ನುಬನ್ನಿಮರದಿಂದಮರಳಿ ಪಡೆದುದರ್ಗೆಯ ಅನುಗ್ರಹವನ್ನುಪಡೆದ ದಿನವಾದ್ದರಿಂದ ಅಂದುಆಯುಧಗಳಪೂಜೆಮತ್ತುವಿ ಜಯದಶಮಿಯಂದು ಯುದ್ಧಗೆದ್ದುದರಿಂದಗೋಗ್ರಹಣಮುಗಿ ದುಗೋವೋಚನವಾದ ದಿನರಾವಣನನ್ನುಶ್ರೀರಾಮನಿಗ್ರಹಿಸಿದದಿನ, ಮತ್ತುಅಪರಾಜಿತೆಯಾದತಾಯಿ ವಿಜಯಲಕ್ಷ್ಮಿಯನ್ನುಒಲಿಸಿಕೊಳ್ಳುವದಿನವಾದ್ದರಿಂದಅದುರಾಜರಿಗೆಪ್ರಶಸ್ತವಾದಸೀಮೋಲ್ಲಂಘನ ಬನ್ನಿಮಹಾಕಾಲಿಯ ಅನುಗ್ರಹಕ್ಕಾಗಿ ಬನ್ನಿಮರದಪೂಜೆ ಮತ್ತು ವಿಜಯದಶಮಿಯಯಾತ್ರೆಗಳನ್ನುಮಾಡಲಾಗುತ್ತದೆ.

ರಾಕ್ಷಸರಮತ್ತುದೇವಿಯರಯುದ್ಧಒಂಬತ್ತು ದಿನಗಳಕಾಲ ನಡೆದು ರಕ್ತಬೀಜಾಸುರನೂ ಸೇರಿದಂತೆ ಎಲ್ಲರಾಕ್ಷಸರೂಹತರಾಗಿ ದೇವಿಯಕೃಪೆಯಿಂದದೇವತೆಗಳುಸ್ಥಾನವನ್ನುಮರಳಿಪಡೆದುಕೊಂಡರು. ಭಾರತೀಯರ ನಂಬಿಕೆಯಪ್ರಕಾರಭಂಡಾಸುರನನ್ನುದೇವಿಯುಒಂಬತ್ತುದಿನಯುದ್ಧಮಾಡಿ, ಹತ್ತನೆಯದಿನವಿಜಯದಶಮಿಯಂದುಸಂಹರಿಸಿದಳು. ಆದ್ದರಿಂದ ವಿಜಯದಶಮಿಯೂದೇವಿಯವಿಜಯದದಿನವೇ.

ನವರಾತ್ರಿಯನ್ನುಆಚರಿಸುವಾಗಒಂಬತ್ತುರಾತ್ರಿಗಳಲ್ಲಿಕ್ರಮವಾಗಿ, ನಾನಾಬಗೆಯಧ್ಯಾನ, ಪಾರಾಯಣ, ಜಪದಮೂಲಕ ದೇವಿಯಆರಾಧನೆಯನ್ನುಮಾಡಲಾಗುತ್ತದೆ. ಅದರಕ್ರಮಹೇಗೆಂದರೆ-

1. ಮಹಾಕಾಳಿ - ಮಧುಕೈಟಭರನ್ನುಸಂಹರಿಸಿದವಳು
2. ಮಹಾಲಕ್ಷ್ಮೀ - ಮಹಿಷಾಸುರನನ್ನುರ್ದಿಸಿದವಳು
3. ಚಾಮುಂಡಾ - ಚಂಡ-ಮುಂಡರನ್ನುಸಂಹರಿಸಿದವಳು
4. ಕಾಳಿ - ರಕ್ತಬೀಜಾಸುರನನ್ನುಸಂಹರಿಸಿದವಳು
5. ದುರ್ಗಿ - ಕಂಸನಸಂಹಾರಮಾಡಿದವಳು
6. ರಕ್ತದಂತೀ - ರ್ವಾಕ್ಷಸಸೈನ್ಯನಾಶಮಾಡಿದವಳು
7. ಶಾಕಂಭರಿ - ಕ್ಷಾಮವನ್ನುನಿವಾರಿಸುವವಳು
8. ದರ್ಗಾ - ದರ್ಗರಾಕ್ಷಸಮತ್ತುದರ್ಗತಿಯನ್ನುನಾಶಮಾಡಿದವಳು
9. ಭ್ರಾಮರಿ - ಅರುಣದೈತ್ಯನಸಂಹಾರಮಾಡಿದವಳು

ಶಾಕ್ತತಂತ್ರಗಳುಮತ್ತುಪುರಾಣಗಳಪ್ರಕಾರನವರಾತ್ರಿಯಸಂರ್ಭದಲ್ಲಿ ಒಂಬತ್ತೂದಿನಗಳಲ್ಲೂ ದಿನಕ್ಕೆಒಂದು ಅವತಾರದಂತೆನವದರ್ಗೆಯರನ್ನು ಪೂಜಿಸಲಾಗುತ್ತದೆ. ಅವರೆಂದರೆ-

1. ಶೈಲಪುತ್ರೀ 2. ಬ್ರಹ್ಮಚಾರಿಣೀ 3. ಚಂದ್ರಘಂಟಾ
4. ಕೂಷ್ಮಾಂಡಾ 5. ಸ್ಕಂದಮಾತಾ 6. ಕಾತ್ಯಾಯನೀ
7. ಕಾಲರಾತ್ರಿ 8. ಮಹಾಗೌರೀ 9. ಸಿದ್ದಿಧಾತ್ರಿ

ನವದರ್ಗೆಯರು

ಶೈಲಪುತ್ರಿ	ಬ್ರಹ್ಮಚಾರಿಣೀ	ಚಂದ್ರಘಂಟಾ
ಕೂಷ್ಮಾಂಡಾ	ಸ್ಕಂದಮಾತಾ	ಕಾತ್ಯಾಯನೀ
ಕಾಲರಾತ್ರಿ		
ಮಹಾಗೌರೀ	ಸಿದ್ದಿದಾತ್ರಿ	

ಮೈಸೂರಿನಚಾಮುಂಡಿಬೆಟ್ಟದಲ್ಲಿಶಕ್ತಿಪೀಠದಕ್ರಮದಲ್ಲಿ ಮೂರುದೇವತೆಯರಸ್ವರೂಪದಲ್ಲಿನಿತ್ಯವೂ ಆಗ ಮೋಕ್ತವಾಗಿ ಪೂಜೆಯುನಡೆಯುತ್ತದೆ. ನವರಾತ್ರಿಯಸಂರ್ಭದಲ್ಲಿದೇ ಏಗೆದಿನವೂ ಒಂದು ಅಲಂಕಾರಮಾಡಲಾಗುತ್ತದೆ. ಏಳುಮಾತೃಕೆಯರುಮತ್ತುಮಹಾಕಾಲೀ, ಮಹಾಸರಸ್ವತೀ, ಮಹಾಲಕ್ಷ್ಮಿಯರ ಅಲಂಕಾರದಲ್ಲಿದೇವಿಯು ಶೋಭಿಸುತ್ತಾಳೆ. ಹತ್ತುದಿನಗಳಪೂಜೆಯಲ್ಲಿತಾಯಿ ಚಾಮುಂಡಿಯನ್ನು ಕೆಳಗಿನಈಅಲಂಕಾರಗಳಲ್ಲಿಅಣಿಗೊಳಿಸಲಾಗುತ್ತದೆ.

1. ಬ್ರಾಹ್ಮಅಲಂಕಾರ - ಚತುರ್ಮುಖಬ್ರಹ್ಮಶಕ್ತಿ



2. ಮಾಹೇಶ್ವರೀಅಲಂಕಾರ - ಶಿವನಶಕ್ತಿ
3. ಕೌಮಾರೀಅಲಂಕಾರ - ಸುಬ್ರಹ್ಮಣ್ಯನಶಕ್ತಿ
4. ವೈಷ್ಣವೀಅಲಂಕಾರ - ವಿಷ್ಣುವಿನಶಕ್ತಿ
5.ವಾರಾಹೀ ಅಲ0ಕಾರ - ವರಾಹದೇವರಶಕ್ತಿ
6. ಇಂದ್ರಾಣೀಅಲಂಕಾರ - ದೇವೇಂದ್ರನಶಕ್ತಿ
7. ಸರಸ್ವತೀಅಲಂಕಾರ (ಬೆಳಗ್ಗೆ)-ಚಾಮುಂಡಾಕಾಲರಾತ್ರಿ (ರಾತ್ರಿ)
8. ಮಹಾಕಾಲೀಸಿಂಹವಾಹಿನಿ - ದರ್ಗಾಅಲಂಕಾರ
9. ಗಜಲಕ್ಷ್ಮೀಅಲಂಕಾರ - ಸಮಸ್ತೈಶ್ವರ್ಯದಸಂಕೇತ
10.ಆಶ್ವದಮೇಲೆಕುಳಿತಕಮಲದ ಮೇಲೆಮಹಾಲಕ್ಷ್ಮೀ - ವಿಜಯದಶಮಿಯದಿನ ಅಪರಾಜಿತೆ.

ಮೈಸೂರುಅರಮನೆಮತ್ತುಶ್ರೀಚಾಮುಂಡೇಶ್ವರಿದೇವಾಲಯದಕ್ರಮದಲ್ಲಿ ನವರಾತ್ರಿಯನ್ನುಮೂರು ಭಾಗಗಳನ್ನಾಗಿ ಮಾಡಿಪೂಜೆನಡೆಸಲಾಗುತ್ತದೆ. ಇದುಮರ್ಕಂಡೇಯಪುರಾಣೋಕ್ತವಾದದರ್ಗಾಸಪ್ತಶತೀಚಂಡಿಪೂಜಾಕ್ರಮವಾಗಿದೆ.

1. ಮೊದಲಮೂರುರಾತ್ರಿಗಳಲ್ಲಿ :ಮಹಾಕಾಲಿದರ್ಗೆಯನ್ನು (ಶರ್ಯಕ್ಕಾಗಿ)
2. ಎರಡನೆಯಮೂರುರಾತ್ರಿಗಳಲ್ಲಿ: ಮಹಾಲಕ್ಷ್ಮೀಯನ್ನು (ಸಂಪತ್ತು, ಐಶ್ರ್ಯ, ಸಮೃದ್ಧಿಗಾಗಿ)
3. ಮೂರನೆಯಮೂರುರಾತ್ರಿಗಳಲ್ಲಿ: ಮಹಾಸರಸ್ವತಿಯನ್ನು (ವಿದ್ಯೆ, ವಿವೇಕ, ಜ್ಞಾನಕ್ಕಾಗಿ) ಆರಾಧಿಸಲಾಗುತ್ತದೆ.

ವಿವಿಧಅಲಂಕಾರಗಳಲ್ಲಿಚೆಲುವೊಡೆದಅಷ್ಟಭುಜವಿಜಯಲಕ್ಷ್ಮೀಅಮ್ಮನವರು.

ದರ್ಗಾಷ್ಟಮೀ

ದರ್ಗಾಷ್ಟಮೀಹೆಸರೇಹೇಳುವಂತೆನವರಾತ್ರಿಯಎಂಟನೆಯದಿನ. ದರ್ಗೆಯನ್ನುಪೂಜಿಸಲಾಗುತ್ತದೆ. ಮಹಾರಾಣಿಯವರುಸುಹಾಸಿನಿಅಥವಾಸುಮಂಗಲಿಯರಿಗೆ (108 ಮಂದಿ) ಪೂಜೆಯನ್ನುಮಾಡಿ ಅವರಿಗೆವಸ್ತ್ರಾದಿಗಳನ್ನುನೀಡುತ್ತಾರೆ. ಆಯುಧಪೂಜೆ

ಮಹಾನವಮಿಎಂದರೆನವಮೀತಿಥಿಗಳಲ್ಲೇಅತ್ಯಂತಮಹತ್ವವಾದಒಂಬತ್ತನೆಯದಿನ. ಆಶ್ವಯುಜಮಾಸದಈದಿನಚಂಡಿಹೋಮದಪರ್ಣಾಹುತಿಯನ್ನುಮಾಡಲಾಗುತ್ತದೆ.

ಚಂಡೀಹವನ, ಕುಮಾರಿಪೂಜೆ

ಈಆಯುಧಗಳುಸೋಮೇಶ್ವರದೇವಾಲಯದಿಂದಬರುವವೇಳೆಗೆ ಕನ್ನಡಿತೊಟ್ಟಿಯಲ್ಲಿ ಮಹಾರಾಜರುಮತ್ತುಅರಮನೆಯ ಎಲ್ಲಪುರೋಹಿತರು ಚಂಡಿಹೋಮದಪರ್ಣಾಹುತಿಯನ್ನುಮಾಡುತ್ತಾರೆ. ಮುಖ್ಯದ್ರವ್ಯಗಳಾಗಿಮೊಸರು, ತುಪ್ಪಇತ್ಯಾದಿಗಳಿದ್ದು, ಉಳಿದಂತೆಪರ್ಣಾಹುತಿದ್ರವ್ಯಗಳಿರುತ್ತವೆ. ಇದುಶತಚಂಡಿಕಾಪಾರಾಯಣದಮತ್ತುಒಂದುಲಕ್ಷದರ್ಗಾಮಂತ್ರದಪರ್ಣಾಹುತಿಯಾಗಿರುತ್ತದೆ. ಆಗಲೇ 16 ಕಲಶಗಳಲ್ಲಿದೇವಿಪೂಜೆಮತ್ತು ನವದರ್ಗೆಯರ ಸ್ವರೂಪದಲ್ಲಿ2-10 ರ್ಷದ ಒಂಬತ್ತುಕನ್ನಿಕೆಯರಕುಮಾರಿಪೂಜೆಯೂನೆರವೇರುತ್ತವೆ.

ಮಹಾರಾಜರುನಿತ್ಯಪೂಜೆಮುಗಿಸಿ, ರಾಜಪೋಷಾ ಕನ್ನುಧರಿಸಿ ಹೊರಭಾಗದಭದ್ರಾಸನದಲ್ಲಿಕುಳಿತುತಮ್ಮಕ್ರಮಪರಂಪರೆಯಲ್ಲಿ ಬಂದಪಟ್ಟದಕತ್ತಿಸೇರಿದಂತೆ ವಿವಿಧಆಯುಧಗಳಿಗೆಪೂಜೆಸಲ್ಲಿಸುತ್ತಾರೆ. ಈಸಮಯದಲ್ಲಿವಾದ್ಯಘೋಷ, ಬ್ಯಾಂಡ್ಮೊಳಗುತ್ತಿರುತ್ತದೆ.

ಕಲ್ಯಾಣಮಂಟಪದಿಂದಹೊರಬರುವಮಹಾರಾಜರುತೊಟ್ಟಿಯಲ್ಲಿನರ್ಮಿಸಿರುವ ಒಂದುವೇದಿಕೆಯಲ್ಲಿನಿಲ್ಲುತ್ತಾರೆ. ಅಲ್ಲಿಪಟ್ಟದಹಸು, ಪಟ್ಟದಕುದುರೆ, ಪಟ್ಟದಆನೆ, ಪಲ್ಲಕ್ಕಿಗಳು, ಬೆಳ್ಳಿಯರಥ, ಈಗಬಳಸುತ್ತಿರುವಎಲ್ಲಆಧುನಿಕಕಾರುಗಳಿಗೆಪೂಜೆಸಲ್ಲಿಸಲಾಗುತ್ತದೆ.

ಅಂದುಸಂಜೆಯರ್ಬ್ರಾ ಚಾಮುಂಡಾ ಪೂಜೆಯ ಉತ್ತರ ವಿಧಿಗಳನ್ನುಆಚರಿಸಿ, ಮಹಾರಾಜರುಮತ್ತುಮಹಾ ರಾಣಿಯವರು ಮೊದಲದಿನಧರಿಸಿದ್ದತಮ್ಮಕಂಕಣಗಳನ್ನುಪ್ರತ್ಯೇಕವಾಗಿವಿರ್ಸಿಸುತ್ತಾರೆ. ಸಿಂಹಾಸನಕ್ಕೆಜೋಡಿಸಿದ್ದಸಿಂಹಕ್ಕೆಪೂಜೆಮಾಡಿಅದನ್ನೂವಿರ್ಸಿಸಲಾಗುತ್ತದೆ. ಅಲ್ಲಿಗೆನವರಾತ್ರಿಯಆಚರಣೆಗಳುಸಂಪನ್ನವಾಗಿ ವಿಜಯದಶಮಿಯ ಆಚರಣೆಗಳಿಗೆಅನುವಾಗುತ್ತಾರೆ.

ವಿಜಯದಶಮಿ

ಹತ್ತನೆಯದಿನವೇವಿಜಯದಶಮಿ, ಮಹಾರಾಜರು ಮೊದಲಿಗೆ ದಂಪತಿಪೂಜೆಯನ್ನುಮಾಡುತ್ತಾರೆ. ರಾಮಾಯಣದಲ್ಲಿ ರಾಮನು ರಾವಣನನ್ನುಸಂಹರಿಸಿ ಆಯೋಧ್ಯೆಗೆ ಮರಳಿಪಟ್ಟಾಭಿಷೇಕವಾದರ್ಗವನ್ನು ಪಾರಾಯಣಮಾಡಲಾಗುತ್ತದೆ. ಇದುರಾಮಪಟ್ಟಾಭಿಷೇಕರ್ಯಕ್ರಮ.

ಬಳಿಕಮಹಾರಾಜರುಸಾಮಾನ್ಯವಸ್ತ್ರಗಳನ್ನುಧರಿಸಿಆತ್ಮವಿಲಾಸ ಗಣಪತಿಯರ್ಶನಪಡೆದು, ಆಯುಧಗಳಿಗೆಪೂಜೆಮಾಡಿ, ಪಟ್ಟದಕತ್ತಿಯಿಂದ ಕೂಷ್ಮಾಂಡಬಲಿ (ಕುಂಬಳಕಾಯಿಭೇದನನೀಡುತ್ತಾರೆ. (ಇದುಹಿಂದೆಪಟ್ಟದ ಕತ್ತಿಯಿಂದಪ್ರಾಣಿಬಲಿಯನ್ನುಕೊಡುತ್ತಿದ್ದಸಂಕೇತವೂಹೌದು.) ಪಟ್ಟದಕತ್ತಿಯನ್ನು ಹಿಡಿದಮಹಾರಾಜರೊಂದಿಗೆ ರಾಜಪರಿವಾರದವರು ಸವಾರಿತೊಟ್ಟಿಗೆಬರುತ್ತಾರೆ.

ವಜ್ರಮುಷ್ಟಿಕಾಳಗ

ಅಲ್ಲಿಕೆಮ್ಮಣ್ಣುಹಾಕಿಅಖಾಡವನ್ನುಸಿದ್ಧಪಡಿಸಿರುತ್ತಾರೆ. ರಾಜಮಾತೆಯಅನುಮತಿಪಡೆದುವಜ್ರಮುಷ್ಟಿಕಾಳಗಆರಂಭವಾಗುತ್ತದೆ. ವಜ್ರಮುಷ್ಟಿಕಾಳಗಮುಕ್ತಾಯವಾದಬಳಿಕಮಹಾರಾಜರುಪಟ್ಟದಕತ್ತಿಯನ್ನು ಪಲ್ಲಕ್ಕಿಯಲ್ಲಿಮೊಹರಿನ (ರಾಜಮುದ್ರೆ) ಜೊತೆಇಡುತ್ತಾರೆ. ಜೊತೆಗೆರಾಜ ವಂಶದ ಇತರಆಯುಧಗಳನ್ನೂಇಡಲಾಗುತ್ತದೆ. ರಾಜಪರಿವಾರದವರು, ಬಂಧುಗಳು, ಅರಮನೆಯಭಟರು, ಅಂಗರಕ್ಷಕಪಡೆಎಲ್ಲರೂ ಸೇರಿ ದಸರಾಮೆರವಣಿಗೆಯಲ್ಲಿಪಾಲ್ಗೊಳ್ಳುತ್ತಾರೆ. ಮಹಾರಾಜರು ಬೆಳ್ಳಿರಥದಲ್ಲಿಕುಳಿತು (ಅಥವಾಕಾರಿನಲ್ಲಿ) ಶಮೀಪೂಜೆಗೆಹೊರಡುತ್ತಾರೆ. ಹಿಂದೆಮಹಾರಾಜರೇಚಿನ್ನದಅಂಬಾರಿಯಲ್ಲಿಆನೆಯಮೇಲೆ ಕುಳಿತು ಜಂಬೂ ಸವಾರಿಯಲ್ಲಿಬನ್ನಿಮಂಟಪಕ್ಕೆಹೋಗುತ್ತಿದ್ದರು. 1969ರಲ್ಲಿ ಈಪದ್ದತಿನಿಂತುಹೋಯಿತು. ಈಗಸರಕಾರಿಪ್ರಾಯೋಜಿತ ಜಂಬೂಸವಾರಿ ಮೆರವಣಿಗೆಬನ್ನಿಮಂಟಪಕ್ಕೆಹೋಗುತ್ತದೆ. ಜಂಬೂ ಸವಾರಿಯ ನಂತರ ದಸರಾ ಮುಕ್ತಾಯವಾಗುತ್ತದೆ.

ಅರಮನೆಯ ಒಳಭಾಗದಲ್ಲಿ ನಡೆಯುವ ಕೌತುಕಭರಿತ ಮಲ್ಲಯುದ್ಧದ ಚಿತ್ರ

ಸಮಾರೋಪ:

ನವರಾತ್ರಿಯದಿನಗಳುಸಂಸಾರದದುಃಖಗಳಿಂದವಿಮೋಚನೆಗೊಂಡು ಮೋಕ್ಷಮರ್ಗವನ್ನುಪಡೆಯಲುದೇ ವಿಯ ಆರಾಧನೆಗೆ ಪ್ರಶಸ್ತವಾಗಿರುವದಿನಗಳು. ಈಒಂಬತ್ತುದಿನಗಳಜೊತೆಗೆರಾವಣನಮೇಲಿನ ರಾಮನ ವಿಜಯದನೆನಪಿನ ವಿಜಯದಶಮಿಆಚರಣೆಯನ್ನುಸೇರಿಸಿ ಒಟ್ಟುಹತ್ತು ದಿನಗಳಆಚರಣೆಯಾಗಿರುವುದರಿಂದಇದು 'ದಸರಾ' ಆಗಿದೆ. ದಸರಾ ಉತ್ಸ ವಪ್ರಪಂಚಾದ್ಯಂತಆಚರಿಸಲ್ಪಡುತ್ತಿದ್ದರೂ ಮೈಸೂರು ದಸರಾತನ್ನವಿಶಿಷ್ಟಆಚರಣೆಗಳಿಂದಾಗಿ ವಿಶ್ವಮಾನ್ಯತೆಯನ್ನುಪಡೆದಿದೆ.

ನನ್ನ ಮುಂದಿನ ಲೇಖನದಲ್ಲಿ ಆಧುನಿಕ ಯುಗದ ದಸರಾ - ಕಣ್ಮನ ಸೆಳೆಯುವ ವಿಶೇಷತೆಗಳ ಬಗ್ಗೆ ತಿಳಿಸಿಕೊಡುತ್ತೇನೆ. ನಿರೀಕ್ಷಿಸಿ.

(ಡಾ. ಶಾಲಿನಿ ರಜನೀಶ್)
ಸರ್ಕಾರದಕಾರ್ಯದರ್ಶಿಗಳು

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR